ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

ಮಾಣಿಕೇಶ್ವರಿ ಮಾತಾ ಸಂದೇಶಗಳು

1

ರಚನೆ:
ಬ್ರಹ್ಮರ್ಷಿ
ತಟವರ್ತಿ ವೀರರಾಘವರಾವು

ಮಾಣಿಕೇಶ್ವರಿ ಮಾತೆಯ ಸಂದೇಶಗಳು 1

ರಚನೆ: ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡಕ್ಕೆ ಅನುವಾದ : ಕೆ.ಶೋಭಾಲತ ಮಲ್ಲಿಕಾರ್ಜುನ

ಪ್ರತಿಗಳು ದೊರೆಯುವ ಸ್ಥಳ

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

pmckannadashop.org
ಹೆಚ್ಚಿನ ಮಾಹಿತಿಗಾಗಿ **pmckannadatv.org**

MANIKESHWARI MAATEYA SANDESHAGALU-1
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

ಮೊದಲನೆಯ ಮುದ್ರಣ	:	2026
ಹಕ್ಕುಗಳು	:	ಪ್ರಕಾಶಕರು
ಪ್ರಕಾಶಕರು	:	ಶ್ರೀರಾಮ ಪಬ್ಲಿಕೇಶನ್ಸ್ ಶ್ರೀರಾಮಧಾಮ ಧ್ಯಾನ ಮಂದಿರ ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್ ಬೆಂಗಳೂರು–560066 ಮೊ: 9449695503
ಪ್ರತಿಗಳು	:	500
ಬೆಲೆ	:	60 ರೂ.
ಪುಟಗಳು	:	52

ಮಾನವ ಜನ್ಮ ಸಾರ್ಥಕವಾಗಬೇಕಾದರೆ ಮೊಟ್ಟ ಮೊದಲು ನಿನ್ನನ್ನು ನೀನು ತಿಳಿದುಕೊಳ್ಳಬೇಕು. ಧ್ಯಾನವನ್ನು ಜೀವನದ ಮುಖ್ಯ ಭಾಗವಾಗಿಸಿಕೊಳ್ಳಬೇಕು. ಮಾತು ಅಥವಾ ಕೃತಿಗಳ ಮೂಲಕ ಯಾರನ್ನೂ ಹಿಂಸಿಸಬಾರದು. ಮನಸ್ಸು ಮತ್ತು ಶರೀರವನ್ನು ಹಾಳುಮಾಡುವ ವ್ಯಸನಗಳಿಗೆ ಬಲಿಯಾಗಬಾರದು. ಸದಾಕಾಲ ಶರೀರ ಮತ್ತು ಮನೆಯನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು. ನಾವು ಮಾಡಬೇಕಾದ ಕೆಲಸಗಳನ್ನು ಪ್ರೀತಿಯಿಂದ, ಸಮರ್ಪಣಾ ಭಾವದಿಂದ ಮಾಡಬೇಕು. ಮುಖ್ಯವಾಗಿ ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಕಡ್ಡಾಯವಾಗಿ ಸೇವಿಸಬಾರದು. ಶುದ್ಧ ಸಸ್ಯಾಹಾರವನ್ನೇ ಸೇವಿಸಬೇಕು.

। ಮಾತಾ ಮಾಣಿಕೇಶ್ವರಿ

ಮಾಣಿಕೇಶ್ವರಿ ಮಾತೆಯ ಸಂದೇಶಗಳು 1

ವಿಷಯ ಸೂಚಿ (ಪರಿವಿಡಿ)

⏭ ನಿಮ್ಮನ್ನು ನೀವು ತಿಳಿದುಕೊಳ್ಳಿ 02

⏭ ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಸೇವಿಸಬೇಡಿ 13

⏭ ಶುದ್ಧ ಶಾಖಾಹಾರವನ್ನೇ ಸ್ವೀಕರಿಸಿ.. 22

⏭ ನೀವು ಮಾಡಬೇಕಾದ ಕೆಲಸಗಳನ್ನು ಪ್ರೀತಿಯಿಂದ,
ಸಮರ್ಪಣಾ ಭಾವದಿಂದ ಮಾಡಿ 26

⏭ ನಿಮ್ಮ ಆಹಾರವನ್ನು ಎಲ್ಲರೊಂದಿಗೆ ಹಂಚಿಕೊಳ್ಳಿ.............................. 28

⏭ ನಿಮ್ಮ ಶರೀರವನ್ನು ಮತ್ತು ಮನೆಯನ್ನು ಶುಚಿಯಾಗಿಟ್ಟುಕೊಳ್ಳಿ........... 29

⏭ ಅತಿಯಾಗಿ ನಿದ್ರಿಸಬೇಡಿ 29

⏭ ನಿಮ್ಮ ಮನಸುನ್ನು ಮತ್ತು ಶರೀರವನ್ನು
ಹಾಳುಮಾಡುವ ವ್ಯಸನಗಳಿಗೆ ಬಲಿಯಾಗಬೇಡಿ 30

⏭ ಕುಡಿತ 30

⏭ ಜೂಜು, ಲಾಟರಿ, ಗುಟ್ಕಾ, ಅಫೀಮು!.. 31

⏭ ಮಾತು ಅಥವಾ ಕೃತಿಗಳ ಮೂಲಕ ಯಾರನ್ನೂ ಹಿಂಸಿಸಬೇಡಿ....... 37

⏭ ಸಾತ್ವಿಕ ಗುಣವುಳ್ಳವರೊಂದಿಗೆ ಸ್ನೇಹ ಬೆಳೆಸಿ.................................. 38

⏭ ಧ್ಯಾನವನ್ನು ನಿಮ್ಮ ಜೀವನದ ಒಂದು ಮುಖ್ಯ ಭಾಗವಾಗಿಸಿಕೊಳ್ಳಿ.... 43

"ನಿನ್ನನ್ನು ನೀನು ತಿಳಿದುಕೊ?"

ರಮಣ ಮಹರ್ಷಿಗಳು ಹೇಳಿದ್ದು ಇದನ್ನೇ, ಪತ್ರೀಜಿಯವರು ನಮಗೆಲ್ಲರಿಗೂ ನೀಡುವ ಸಂದೇಶದ ಸಾರವೂ ಇದೇ ಆಗಿದೆ.

ನಾವು ಯಾರು ಎನ್ನುವುದನ್ನೇ ಅವರು ಯಾವಾಗಲೂ ಹೇಳುತ್ತಿರುತ್ತಾರೆ. ಅದನ್ನೇ ಮಾಣಿಕ್ಯೇಶ್ವರಿ ಮಾತೆಯವರು ಕೂಡ ಹೇಳಿದರು; ಅವರು "ನಿನ್ನನ್ನು ನೀನು ತಿಳಿದುಕೊ" ಎಂದರು. ಏಕೆಂದರೆ ಸಹಜವಾಗಿ ಲೋಕದಲ್ಲಿ "ನೀವು ಯಾರು?" ಎಂದು ಕೇಳಿದರೆ ನಿಮ್ಮ ಹೆಸರನ್ನು ಹೇಳುತ್ತೀರಿ. ನೀವು ಹೇಗೆ ಇರುತ್ತೀರಿ ಎಂದರೆ ಫೇಸ್ಬುಕ್ ಅಥವಾ ವಾಟ್ಸಾಪ್ನಲ್ಲಿ ಫೋಟೋ ಹಾಕಿ, "ನನ್ನ ಫೋಟೋ ಹಾಕಿದ್ದೇನೆ ನೋಡು" ಎನ್ನುತ್ತೀರಿ.

ಆ ಹೆಸರು, ಫೋಟೋದಲ್ಲಿ ಕಾಣಿಸುವುದು ಆ ದೇಹಕ್ಕೆ ಸಂಬಂಧಿಸಿದ್ದು. ಅಂದರೆ ಅವರ ಉದ್ದೇಶ ಆ ದೇಹವೇ ತಾನು ಎಂದು. ಆದರೆ ನಿಜವಾಗಿಯೂ ನೀವೇ ಆ ದೇಹವಾಗಿದ್ದರೆ, ಆ ಪ್ರಶ್ನೆಯನ್ನು ಕೇಳುವ ಅಗತ್ಯವೇ ಇರುತ್ತಿರಲಿಲ್ಲ ಅಥವಾ ಇದರ ಬಗ್ಗೆ ಯೋಚಿಸುವ ಅಗತ್ಯವೂ ಇರುತ್ತಿರಲಿಲ್ಲ. ಆಕೆ ಈ ಪ್ರಶ್ನೆಯನ್ನು ಕೇಳಿದ್ದಾರೆ ಎಂದರೆ, ಖಂಡಿತವಾಗಿಯೂ ನೀವು ಅಂದುಕೊಂಡಂತೆ ನೀವು ಈ ದೇಹವಲ್ಲ. ಪತ್ರಿಜಿಯವರು ಸ್ಪಷ್ಟವಾಗಿ "ನೀವು ಈ ದೇಹವಲ್ಲ" ಎಂದು ಹೇಳಿದ್ದಾರೆ. ಹಾಗಾದರೆ "ನಾನು ಯಾರು?" ಎಂದು ಪ್ರಶ್ನಿಸಿಕೊಂಡಾಗ ನಿಮಗೆ ಅರ್ಥವಾಗುತ್ತದೆ. 23 ವರ್ಷಗಳ ಹಿಂದೆ ಪತ್ರೀಜಿಯವರಿಂದ ನಾನು ತಿಳಿದುಕೊಂಡ ಆಶ್ಚರ್ಯಕರ ವಿಷಯವೇನೆಂದರೆ, "ನೀವು ದೇಹವಲ್ಲ" ಎಂದು ಅವರು ಹೇಳಿದಾಗ ನಾನು ಬೆರಗಾದೆ. ನಂತರ "ನಾನು ದೇಹವಲ್ಲದಿದ್ದರೆ, ನಾನು ಯಾರು?" ಎಂದು ಕೇಳಿದೆ. ಅದಕ್ಕೆ ಅವರು "ನೀನು ಆತ್ಮ" ಎಂದು ಹೇಳಿದರು, ಇದು ನನಗೆ ಇನ್ನೂ ಹೆಚ್ಚು ಆಶ್ಚರ್ಯ ತಂದಿತು. "ನಾನು ಈ ದೇಹವಲ್ಲವೇ? ನಾನು ಆತ್ಮನೇ?" ಎಂದು ಸ್ವಲ್ಪ ಆಳವಾಗಿ ಅಧ್ಯಯನ ಮಾಡಿದಾಗ ಪತ್ರಿಜಿಯವರು ಹೇಳಿದ್ದು ಸತ್ಯ ಎಂದು ತಿಳಿಯಿತು.

ಆಗ ನಾನು ಯೋಚಿಸಿದೆ! ಸುಮಾರು 50 ವರ್ಷಗಳ ಕಾಲ ಹಗಲಿರುಳು ಕಷ್ಟಪಟ್ಟು ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಸಂಪಾದಿಸಿದೆ. ಆದರೆ ಈ ಕೋಟಿಗಳು ನನಗೆ ಅಂದರೆ ಆತ್ಮಕ್ಕೆ ಏನಾದರೂ ಲಾಭವೇ? ಎಂದು ಯೋಚಿಸಿದಾಗ ಅದರಿಂದ ನನಗೇನೂ ಲಾಭವಿಲ್ಲ ಎಂಬುದು ಅರ್ಥವಾಯಿತು. ಅರೆ! ಇಷ್ಟು ಕಾಲ ನಾನು ಪಟ್ಟ ಶ್ರಮವೆಲ್ಲವೂ ವ್ಯರ್ಥವೇ? ಇದೆಲ್ಲವೂ ವ್ಯರ್ಥವೇ

ಎಂದು ಆಲೋಚಿಸಿದಾಗ ಖಂಡಿತವಾಗಿಯೂ ವ್ಯರ್ಥ ಎಂದು ಅರ್ಥವಾಯಿತು. ಅಂದರೆ ಇಷ್ಟು ವರ್ಷಗಳಿಂದ ಇಷ್ಟು ಕಷ್ಟಪಟ್ಟು ಸಂಪಾದಿಸಿದ ಆಸ್ತಿಗಳು ಯಾವುದೂ ನನಗೆ ಉಪಯೋಗಕ್ಕೆ ಬರುವುದಿಲ್ಲ ಎಂದು ತಿಳಿಯಿತು.

ನಾನು ಎಂದರೆ 'ಆತ್ಮ'ನಿಗೆ ಯಾವುದೂ ಲಾಭವಿಲ್ಲ ಎಂದು ತಿಳಿದುಕೊಂಡೆನು. ಆಗ ಆಲೋಚಿಸಿದೆನು, ಹಾಗಾದರೆ ನಾನು ಎಂದರೆ ಆತ್ಮನಿಗೆ ಲಾಭವಾಗಬೇಕೆಂದರೆ ಏನು ಮಾಡಬೇಕು? ಎಂದು ಪ್ರಶ್ನಿಸಿಕೊಂಡೆನು. ಏನು ಮಾಡಿದರೆ ನನಗೆ ಲಾಭ ಉಂಟಾಗುತ್ತದೆ? ಅಸಲಿಗೆ ಆತ್ಮನಾದ ನನಗೆ ಎಂತಹ ಲಾಭ ಬೇಕು? ನಾನು ಏನನ್ನು ಸಂಪಾದಿಸಿಕೊಳ್ಳಬೇಕು ಎಂದು ಆಲೋಚಿಸಿದಾಗ ಎಷ್ಟೋ ವಿಷಯಗಳನ್ನು ನಾನು ತಿಳಿದುಕೊಳ್ಳಲು ಸಾಧ್ಯವಾಯಿತು.

ಇವೆಲ್ಲವನ್ನೂ ತಿಳಿದುಕೊಂಡ ನಂತರ ಅಲ್ಲಿಯವರೆಗೆ ನಾನು ಮಾಡುತ್ತಿದ್ದ ವ್ಯಾಪಾರಗಳನ್ನೆಲ್ಲಾ ನಿಲ್ಲಿಸಿದೆನು. ನನಗೆ ಉಪಯೋಗಕ್ಕೆ ಬಾರದ ಕೆಲಸಗಳು ನನಗೇಕೆ? ಮಾಡುವುದರಿಂದ ಉಪಯೋಗವೇನು? ನಾನು ಎಷ್ಟೇ ವ್ಯಾಪಾರಗಳನ್ನು ಮಾಡಿದರೂ, ಎಷ್ಟೇ ಸಂಪಾದಿಸಿದರೂ ಕೂಡ ನನಗೆ ಉಪಯೋಗವಾಗವು. ಮೇಲಾಗಿ ಅವುಗಳನ್ನು ಸಂಪಾದಿಸಲು ಎಷ್ಟೋ ತಪ್ಪುಗಳು, ಪಾಪಗಳು, ಅಧರ್ಮದ ಕೆಲಸಗಳನ್ನು ಮಾಡಿದರೆ ಪಾಪ ಹೆಚ್ಚಾಗಿ ಕೊನೆಗೆ ನನಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಸಂಗತಿ ಅರ್ಥವಾಯಿತು.

ಪತ್ರೀಜಿಯವರ ಪರಿಚಯವಾದ ನಂತರ ನನ್ನ ಜೀವನ ಸಂಪೂರ್ಣವಾಗಿ "ಯು ಟರ್ನ್" ಪಡೆಯಿತು, ಅಂದರೆ ಪೂರ್ತಿಯಾಗಿ ಬದಲಾಯಿತು. ಈಗ ಅದಕ್ಕಿಂತ ಮುಂಚೆ ಮಾಡುತ್ತಿದ್ದ ಕೆಲಸಗಳೆಲ್ಲವೂ ಪೂರ್ತಿಯಾಗಿ ಬದಲಾಗಿವೆ. ಈ ಪ್ರದೇಶದಲ್ಲಿ ನಮ್ಮ ಅಕ್ಕಿ ಗಿರಣಿ (ರೈಸ್ ಮಿಲ್) ಉದ್ದಿಮೆ ದೊಡ್ಡದಾಗಿತ್ತು. ಅಂತಹ ದೊಡ್ಡ ಉದ್ದಿಮೆಯನ್ನು ಮುಚ್ಚುವುದು, ಹಾಗೆಯೇ ಉಳಿದ ವ್ಯಾಪಾರಗಳನ್ನೆಲ್ಲಾ ಮುಚ್ಚುವುದು ನೋಡಿ ಜನರಿಗೆ ಆಶ್ಚರ್ಯವಾಯಿತು. "ನಿಮಗೆ ಇಷ್ಟವಾದದ್ದನ್ನು ನೀವು ಮಾಡಿಕೊಳ್ಳಿ, ನನಗಂತೂ ಈ ವ್ಯಾಪಾರಗಳು ಬೇಡ" ಎಂದು ಮಕ್ಕಳಿಗೆ ಹೇಳಿದೆನು.

ಹಾಗೆ ಅವರಿಗೆ ನೀಡಬೇಕಾದ್ದನ್ನು ಹಸ್ತಾಂತರಿಸಿ, ನನಗೆಂದು ಸ್ವಲ್ಪ ಮಾತ್ರ ಇಟ್ಟುಕೊಂಡು, ಆತ್ಮನಾದ ನಾನು ಲಾಭ ಪಡೆಯಬೇಕಾದರೆ ಏನು ಮಾಡಬೇಕು? ಎಂದು ಆಲೋಚಿಸಿದೆನು. ಆಗ ಪತ್ರೀಜಿಯವರ ಹತ್ತಿರ ನನಗೆ ಬೇಕಾಗಿರುವುದು ಹಣವಲ್ಲ. ಜ್ಞಾನ ಎಂದರೇನು ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಲಾಭ ಪಡೆಯಬೇಕೆಂದರೂ, ನನಗೆ ಉನ್ನತಿ ಸಿಗಬೇಕೆಂದರೂ, ನಾನು ಶ್ರೇಷ್ಠ

ಸ್ಥಿತಿಯನ್ನು ತಲುಪಬೇಕೆಂದರೂ "ಜ್ಞಾನ" ಸಂಪಾದಿಸಬೇಕು ಎಂಬುದು ನನಗೆ ಅರ್ಥವಾಯಿತು. ಆಗ ಮತ್ತೆ ಪತ್ರೀಜಿಯವರ ಸಂದೇಶಗಳ ಮೂಲಕ, ಹಣ ಸಂಪಾದಿಸಬೇಕೆಂದರೆ ಯಾವುದೋ ಒಂದು ವ್ಯಾಪಾರ ಮಾಡಬೇಕು, ಆದರೆ ನಾನು ಜ್ಞಾನ ಸಂಪಾದಿಸಬೇಕೆಂದರೆ ಮುಖ್ಯವಾಗಿ "ನಾಲ್ಕು ವಿಷಯಗಳನ್ನು" ಆಚರಿಸಬೇಕು ಎಂದು ಅರ್ಥಮಾಡಿಕೊಂಡೆನು.

ಮುಖ್ಯವಾಗಿ "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನ ಮಾಡುವುದು, ಅಂದರೆ ಮನಸ್ಸು ಯಾವುದೇ ಕೆಲಸ ಮಾಡದ ಸ್ಥಿತಿಯಲ್ಲಿ ಗಂಟೆಗಟ್ಟಲೆ ಕುಳಿತುಕೊಳ್ಳಲು ಸಾಧ್ಯವಾಗಬೇಕು.

ಧ್ಯಾನದ ಮೂಲಕ ಹೊರಗಿನ ಪ್ರಪಂಚದಲ್ಲಿ ನಮಗೆ ಏನೂ ಕಾಣಿಸುವುದಿಲ್ಲ, ಆದರೆ ಅಂತರಂಗದಲ್ಲಿ ಅನೇಕ ಬದಲಾವಣೆಗಳು ಸಂಭವಿಸುತ್ತವೆ. ಅಂತರಂಗದಲ್ಲಿ ಇರುವುದು ಮನಸ್ಸು. ಆ ಮನಸ್ಸಿನ ಆಧಾರದ ಮೇಲೆಯೇ ಮನುಷ್ಯನ ನಡವಳಿಕೆ ಮತ್ತು ಜೀವನ ಅವಲಂಬಿತವಾಗಿರುತ್ತದೆ. ಆ ಮನಸ್ಸಿನಲ್ಲಿ ಉಂಟಾಗುವ ಅದ್ಭುತ ಬದಲಾವಣೆಗಳಿಂದ ಜೀವನದಲ್ಲಿ ಎಷ್ಟೋ ಲಾಭಗಳನ್ನು ಪಡೆಯಬಹುದು. ಆದ್ದರಿಂದ ಅಂತಹ ದೊಡ್ಡ ಬದಲಾವಣೆ ಬರಬೇಕೆಂದರೆ ತೀವ್ರವಾದ ಧ್ಯಾನ ಸಾಧನೆ ಮಾಡಬೇಕು. ಅದರ ಜೊತೆಗೆ ಆತ್ಮ ಸ್ವರೂಪಿಗಳಾದ ನಮಗೆ ಲಾಭವಾಗಬೇಕೆಂದರೆ "ಆತ್ಮಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು" ಓದಬೇಕು. ಮಹಾಪುರುಷರು, ಆತ್ಮಜ್ಞಾನಿಗಳು ಬರೆದಂತಹ ಆತ್ಮಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬೇಕು. ಅದರ ಜೊತೆಗೆ ಪತ್ರೀಜಿಯವರು "ಸಾಂಗತ್ಯ" ಮಾಡಬೇಕೆಂದು ಹೇಳಿದರು. ಆ ಜ್ಞಾನವನ್ನು, ಆತ್ಮಜ್ಞಾನವನ್ನು ಬೋಧಿಸಬಲ್ಲವರ ಸಾಂಗತ್ಯ ಮಾಡಬೇಕೆಂದು ತಿಳಿಸಿದರು. ಅಂತಹವರ ಸಾಂಗತ್ಯ ಮಾಡಿದಾಗ ನಮಗೆ ಎಷ್ಟೋ ಸಂದೇಹಗಳು ನಿವಾರಣೆಯಾಗುತ್ತಿರುತ್ತವೆ.

ಹಾಗೆಯೇ ಜ್ಞಾನಮಾರ್ಗದಲ್ಲಿ ಎಷ್ಟು ಸಾಧ್ಯವೋ ಅಷ್ಟು "ಸೇವೆ" ಕೂಡ ಮಾಡ ಬೇಕೆಂದು ಹೇಳಿದರು. ಅಂತಹ ಸೇವೆಗಳನ್ನು ಮಾಡುತ್ತಿದ್ದರೆ ಕ್ರಮೇಣ ಜ್ಞಾನವು ಹೆಚ್ಚುತ್ತಾ ಇರುತ್ತದೆ. ನಮಗೆ ಕಳೆದ 25 ವರ್ಷಗಳಿಂದ ಇನ್ನೊಂದು ಕೆಲಸ ಏನೂ ಇಲ್ಲ. ನಮ್ಮ ಬಳಿ ಇರುವುದೆಲ್ಲಾ ಎಂದರೆ ನಮ್ಮ ಸಮಯ, ಶಕ್ತಿ, ಮಾತು, ಜೀವನ ಮತ್ತು ಹಣ–ಎಲ್ಲವನ್ನೂ ಇವುಗಳಿಗಾಗಿ ವಿನಿಯೋಗಿಸುತ್ತಿದ್ದೇವೆ. ಯಾವಾಗಾದರೆ ಇವುಗಳಿಗಾಗಿ ವಿನಿಯೋಗಿಸುತ್ತಿದ್ದೆವೆಯೋ, ಆಗ ನಾವಿಬ್ಬರೂ ಸ್ವಲ್ಪ ಸ್ವಲ್ಪವಾಗಿ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು, ಎಷ್ಟೋ ಜ್ಞಾನ ವನ್ನು ಸಂಪಾದಿಸುವುದು ಸಾಧ್ಯವಾಯಿತು. ಅದನ್ನೇ ಈಗ ಎಲ್ಲರಿಗೂ ನಾವು ಬೋಧಿಸುತ್ತಿದ್ದೇವೆ.

ನಾವು ಸಂಪಾದಿಸಿದ ಜ್ಞಾನದಿಂದಲೇ ಇಷ್ಟೊಂದು ವಿಷಯಗಳನ್ನು ನಾವು ಬೋಧಿಸಲು ಸಾಧ್ಯವಾಗುತ್ತಿದೆ. ಈ ಧ್ಯಾನದೊಳಗೆ ಬರುವ ಮೊದಲು ನಮಗೆ ಏನೂ ತಿಳಿಯುತ್ತಿರಲಿಲ್ಲ. ನಾನು ವ್ಯಾಪಾರದಲ್ಲಿದ್ದೆ, ಆಕೆ ಸಂಸಾರದಲ್ಲಿದ್ದಳು. ಹಣ ಸಂಪಾದಿಸಿ ಸುಖವಾಗಿ ಇದ್ದರೆ ಅದೇ ದೊಡ್ಡ ವಿಷಯ ಎಂದು ಅಂದುಕೊಂಡಿದ್ದೆವು. ಆದರೆ ಎಷ್ಟೇ ಸುಖವಾಗಿದ್ದರೂ ಅಶಾಂತಿ ಮಾತ್ರ ತಪ್ಪುತ್ತಿರಲಿಲ್ಲ. ಯಾವುದೋ ಒಂದು ವಿಷಯದ ಬಗ್ಗೆ ಯಾವಾಗಲೂ ಅಶಾಂತಿಯಾಗಿ ಇರುತ್ತಿತ್ತು. ಆದರೆ ಈ ಮಾರ್ಗಕ್ಕೆ ಬಂದ ಮೇಲೆ ಯಾವಾಗಲೂ ಶಾಂತಿಯಿಂದಲೇ ನಾವು ಜೀವಿಸಲು ಸಾಧ್ಯವಾಗುತ್ತಿದೆ.

ಈ ಹಂತಕ್ಕೆ ಹೇಗೆ ಬರಲು ಸಾಧ್ಯವಾಯಿತು ಎಂದರೆ, ಪತ್ರೀಜಿಯವರ ಪರಿಚಯವಾದ ಮೇಲೆ ನಾವು ಯಾರು ಎಂದು ನಾವು ತಿಳಿದುಕೊಳ್ಳಲು ಸಾಧ್ಯವಾಯಿತು. ನಾವು ಏನು ಮಾಡಬೇಕು ಎಂಬುದು ಕೂಡ ನಮಗೆ ತಿಳಿಯಿತು. ಆ ವಿಷಯವನ್ನೇ ಮಾಣಿಕ್ಯೇಶ್ವರಿ ಮಾತೆ 'ನಿನ್ನನ್ನು ನೀನು ತಿಳಿದುಕೋ' ಎಂದು ಸ್ಪಷ್ಟವಾಗಿ ಹೇಳಿದರು. ಪ್ರತಿಯೊಬ್ಬರಿಗೂ ಇದು ಬಹಳ ಮುಖ್ಯ. ರಮಣ ಮಹರ್ಷಿಗಳ ಬಳಿಗೆ ಯಾರು ಯಾವ ಸಮಸ್ಯೆಯೊಂದಿಗೆ ಬಂದರೂ, ಅವರು ಎಲ್ಲರಿಗೂ ಇದೇ ಪ್ರಶ್ನೆಯನ್ನು ಕೇಳುತ್ತಿದ್ದರು. ಲೋಕದಲ್ಲಿ ಸಹಜವಾಗಿ ಸಮಸ್ಯೆಗಳು ಇಲ್ಲದವರು ಯಾರೂ ಇರುವುದಿಲ್ಲ. ಎಷ್ಟೇ ಹಣವಿದ್ದರೂ ಯಾವುದೋ ಒಂದು ಸಮಸ್ಯೆ ಎದುರಾಗುತ್ತಲೇ ಇರುತ್ತದೆ. ಏನು ಮಾಡಬೇಕೆಂದು ಅರ್ಥವಾಗುವುದಿಲ್ಲ, ತೋಚುವುದಿಲ್ಲ. ಅಂತಹ ಸಮಯದಲ್ಲಿ ದೊಡ್ಡವರನ್ನು ಆಶ್ರಯಿಸುತ್ತಿರುತ್ತಾರೆ. ಹಾಗೆಯೇ ರಮಣ ಮಹರ್ಷಿಗಳ ಹತ್ತಿರ ಕೂಡ ಎಲ್ಲೆಲ್ಲಿಂದಲೋ, ವಿದೇಶಗಳಿಂದ ಕೂಡ ಜನರು ಬರುತ್ತಿದ್ದರು. ಅವರು ಬಂದು ತಮ್ಮ ಸಮಸ್ಯೆಗಳ ಬಗ್ಗೆ ಹೇಳುತ್ತಿದ್ದರೆ, ಮಹರ್ಷಿಗಳು ಒಂದೇ ಮಾತು ಹೇಳುತ್ತಿದ್ದರು: 'ಮೊದಲು ನೀನು ಯಾರು ಎಂದು ತಿಳಿದುಕೋ' ಎನ್ನುತ್ತಿದ್ದರು. ಅಂದರೆ ಅದರಲ್ಲೇ ಸಂಪೂರ್ಣ ರಹಸ್ಯ ಅಡಗಿದೆ ಎಂಬುದು ಅರ್ಥವಾಗುತ್ತದೆ.

ಒಬ್ಬ ಮಹಾನುಭಾವರು ಒಂದು ವಿಷಯ ಹೇಳಿದ್ದಾರೆಂದರೆ ಅದರೊಳಗೆ ಎಷ್ಟೋ ಅರ್ಥವಿರುತ್ತದೆ. ಅದರ ಬಗ್ಗೆಯೇ ನಾನು ಹೆಚ್ಚು ಕಡಿಮೆ ಎಷ್ಟೋ ವಿಷಯಗಳನ್ನು ಹೇಳುತ್ತಿದ್ದೇನೆ. ಪತ್ರಿಜೀ ಮೂಲಕ ಎಷ್ಟೋ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಅವನ್ನೇ ಎಲ್ಲರಿಗೂ ನಾನು ಹೇಳುತ್ತಿದ್ದೇನೆ.

ತಿಳಿದುಕೊಂಡ ವಿಷಯಗಳನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳುತ್ತಾ ಹೋದಂತೆ ನಿಮ್ಮ ಜೀವನದಲ್ಲಿ ಎಷ್ಟೋ ಬದಲಾವಣೆ ಬರುತ್ತದೆ. ಅದಕ್ಕಾಗಿಯೇ

ಮಾಣಿಕ್ಯೇಶ್ವರಿ ಮಾತೆ ಹೇಳಿದಂತಹ ಈ ಒಂದು ಮಾತನ್ನೇ ನೀವು ಎಷ್ಟಾದರೂ ಹೇಳಿಕೊಳ್ಳಬಹುದು. "ನೀನು ಯಾರು?" ಎನ್ನುವ ಪ್ರಶ್ನೆಯಲ್ಲಿ ಎಷ್ಟೋ ಅರ್ಥವಿದೆ. "ನಾನು ಯಾರು?" ಎಂದರೆ – "ನಾನು ಆತ್ಮ". ಇದನ್ನು ಅಸಲಿಯಾಗಿ ತಿಳಿದುಕೊಂಡರೆ ನಿಮ್ಮಲ್ಲಿರುವ ಅರ್ಧದಷ್ಟು ದುಃಖ ದೂರವಾದಂತೆ. ಅದು ಅನುಭವಕ್ಕೆ ಬಂದರೆ, ಅಂದರೆ ಆಚರಣೆಗೆ ತಂದರೆ ನಿಮಗಿರುವ 100% ದುಃಖವೂ ದೂರವಾದಂತೆಯೇ ಲೆಕ್ಕ.

ನಿಮಗೆ ಬರುವ ಸಮಸ್ಯೆಗಳಾಗಲಿ, ಕಷ್ಟಗಳಾಗಲಿ, ಬಾಧೆಗಳಾಗಲಿ ಏನೇ ಇದ್ದರೂ ಅವು ದೇಹಕ್ಕೆ ಸಂಬಂಧಿಸಿದ್ದೇ ಹೊರತು, ಆತ್ಮಕ್ಕೆ ಸಂಬಂಧಿಸಿದ್ದಲ್ಲ. ನೀವು ಆತ್ಮವಾದಾಗ ನಿಮಗೆ ಏನಿರುತ್ತವೆ? ಏನೂ ಇರುವುದಿಲ್ಲ. ರಮಣ ಮಹರ್ಷಿಗಳಿಗೆ ಅಂತಿಮವಾಗಿ ಕ್ಯಾನ್ಸರ್ ಬಂದಿತ್ತು. ಆ ಕ್ಯಾನ್ಸರ್ ಗಾಯವನ್ನು ನೋಡಿ ಎಲ್ಲರೂ "ನಿಮಗೆ ನೋವಾಗುತ್ತಿಲ್ಲವೇ? ಡಾಕ್ಟರ್‌ಗೆ ತೋರಿಸಿಕೊಳ್ಳಬಹುದು ಅಲ್ವಾ?" ಎನ್ನುತ್ತಿದ್ದರು. ಆಗ ಅವರು "ಆ ಶರೀರ ಯಾವುದೋ ಮಾಡಿಕೊಂಡಿದೆ, ಅನುಭವಿಸುತ್ತಿದೆ. ಅದರ ಗಲಾಟೆ ನಿನಗೇಕೆ? ನೀನು ಇಲ್ಲಿಗೆ ಯಾಕೆ ಬಂದೆಯೋ ಮೊದಲು ಅದನ್ನು ಹೇಳು" ಎನ್ನುತ್ತಿದ್ದರು.

ಅಂತಹ ಕ್ಯಾನ್ಸರ್ ಗಾಯವಿದ್ದರೂ, ನಿಜವಾಗಿ ಅಷ್ಟು ದೊಡ್ಡದಾಗುತ್ತಿದ್ದರೆ ಯಾರೇ ಆದರೂ ವಿಲವಿಲ ಒದ್ದಾಡುತ್ತಾರೆ, "ನನ್ನ ಬದುಕು ಹೀಗಾಗಿಹೋಯಿತೇ" ಎಂದು ಅಂದುಕೊಳ್ಳುತ್ತಾರೆ. ಆದರೆ ಅವರು ಅದನ್ನು ಬಹಳ ಹಗುರವಾಗಿ ತೆಗೆದುಕೊಂಡರು, ಅಸಲು ಅದು ಇಲ್ಲವೇನೋ ಎಂಬಂತೆ ವರ್ತಿಸುತ್ತಿದ್ದರು. ಕಾರಣ, ಅವರು "ನಾನು ಆತ್ಮ" ಎನ್ನುವುದನ್ನು ಅನುಭವದಲ್ಲಿ ಅರಿತಿದ್ದರು. ಆ ಕ್ಯಾನ್ಸರ್ ಆತ್ಮಕ್ಕೆ ಬಂದದ್ದಲ್ಲ, ಅವರು ಆತ್ಮಸ್ಥಿತಿಯಲ್ಲಿ ಜೀವಿಸುತ್ತಿದ್ದರು, ಅದಕ್ಕಾಗಿಯೇ ಅವರು ಅದನ್ನು ಹಿಡಿಸಿಕೊಳ್ಳಲಿಲ್ಲ. ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಹೇಳಿದ್ದಾನಲ್ಲವೇ? "ಆತ್ಮವನ್ನು ಅಗ್ನಿ ದಹಿಸಲಾಗದು, ನೀರು ತೇವಗೊಳಿಸಲಾರದು, ಶಸ್ತ್ರವು ಛೇದಿಸಲಾರದು, ಗಾಳಿಯು ಆರಿಸಲಾರದು ಎಂದು, ನೀವು ಕೂಡ ಅಂತಹ ಆತ್ಮಗಳೇ ಎಂದು, ನೀವು ಅಂತಹ ಆತ್ಮಸ್ಥಿತಿಗೆ ಹೋದರೆ ನಿಮಗೂ ಈ ಬಾಧೆ ಇರುವುದಿಲ್ಲ.

ಅದನ್ನೇ ನಮಗೆ ಪತ್ರಿಜಿಯವರು ಹೇಳಿದರೂ, ಯಾರು ಹೇಳಿದರೂ! ಧ್ಯಾನವೇಕೆ ಎಂದು ಕೇಳಿದರೆ ಅದನ್ನೇ ಹೇಳುತ್ತಾರೆ. ಪತ್ರಿಜಿಯವರನ್ನು ಯಾವ ಪ್ರಶ್ನೆ ಕೇಳಿದರೂ ಕೊನೆಗೆ ಧ್ಯಾನದ ಹತ್ತಿರಕ್ಕೆ ಕರೆತರುತ್ತಾರೆ. ಯಾವ ಸಮಸ್ಯೆಯ ಬಗ್ಗೆ ಕೇಳಿದರೂ, ಅದಕ್ಕೆ ಪರಿಹಾರ ಧ್ಯಾನವೇ ಎನ್ನುತ್ತಾರೆ.

ಅದಕ್ಕೆ ಕೇಳುವುದರಲ್ಲಿ ಏನಿದೆ? ಅವರು ಅದನ್ನೇ ಹೇಳುತ್ತಾರೆ ಅಲ್ವಾ ಎಂದು ಬಹಳಷ್ಟು ಜನರು ಅಂದುಕೊಳ್ಳುತ್ತಾರೆ. ಹಾಗೆಯೇ ರಮಣ ಮಹರ್ಷಿಯವರು 'ನೀನು ಯಾರೆಂದು ತಿಳಿದುಕೊ' ಎನ್ನುತ್ತಿದ್ದರು. ಅದಕ್ಕಾಗಿಯೇ ನೀನು ಯಾರೆಂದು ಅನುಭವಕ್ಕೆ ತಂದುಕೊಳ್ಳಲು ಮಾಡಬೇಕಿರುವುದು "ಶ್ವಾಸದ ಮೇಲೆ ಗಮನ" ಧ್ಯಾನ ಎಂದು ಪತ್ರೀಜಿಯವರು ನಮಗೆ ಹೇಳಿದ್ದಾರೆ. ಅದು ಅರ್ಥವಾಗಿ ನೀವು ಆ ಸ್ಥಿತಿಗೆ ತಲುಪಿದರೆ ಇನ್ನೇನು ಇರುತ್ತದೆ?

ಜೇಸಸ್ ಕ್ರೈಸ್ತರನ್ನು ಶಿಲುಬೆಗೇರಿಸಿ ಮೊಳೆ ಹೊಡೆದರು. ನಿಮಗೆ "ಸೂಜಿ" ಚುಚ್ಚಿದರೇನೇ ವಿಲವಿಲನೆ ಒದ್ದಾಡುತ್ತೀರಿ! ಅಂದಮೇಲೆ ಶಿಲುಬೆಗೆ ಮೊಳೆಗಳನ್ನು ಹೊಡೆಯುತ್ತಿದ್ದರೂ ಅವರು ಅಳಲಿಲ್ಲ! ಬದಲಾಗಿ ಅವರು ತಂದೆಯನ್ನು ಪ್ರಾರ್ಥಿಸಿದರು. **"ಇವರಿಗೆ ತಿಳಿಯದೆ ಅಜ್ಞಾನದಿಂದ ಹೀಗೆ ವರ್ತಿಸುತ್ತಿದ್ದಾರೆ, ಇವರನ್ನು ಕ್ಷಮಿಸು ತಂದೆ"** ಎಂದರು. ಅಂದರೆ ಅವರಿಗಿಂತ ದೊಡ್ಡವನಾದ, ಎಲ್ಲರಿಗೂ ತಂದೆಯಾದ ಆ ಪರಮಾತ್ಮನನ್ನು ಕ್ಷಮಿಸಬೇಕೆಂದು ಅವರು ಕೇಳಿಕೊಂಡರು. ಜೇಸಸ್ ಮೊಳೆ ಹೊಡೆದರೂ ಏಕೆ ಲಕ್ಷಿಸಲಿಲ್ಲ? ಅಂದರೆ ಅವರು ಆತ್ಮಸ್ಥಿತಿಯಲ್ಲಿದ್ದರು ಆದ್ದರಿಂದಲೇ.

ಹಾಗೆ ಯಾರು ದೇಹಸ್ಥಿತಿಯಿಂದ ಆತ್ಮಸ್ಥಿತಿಗೆ ತಲುಪುತ್ತಾರೋ ಅವರು ಈ ಕಷ್ಟಗಳನ್ನು, ಬಾಧೆಗಳನ್ನು ಲೆಕ್ಕಿಸುವುದಿಲ್ಲ. ನಾನು ಏನೆನ್ನುತ್ತೇನೆಂದರೆ? "ಅಸಲು ನೀನು ಯಾರೆಂದು ನಿನಗೆ ತಿಳಿದರೆ, ಅರ್ಧ ದುಃಖ ಹೋದಂತೆ" ಎನ್ನುತ್ತೇನೆ. ನೀವೇನಾದರು ಧ್ಯಾನ ಮಾಡುತ್ತಾ, ಅನುಭವಕ್ಕೆ ತಂದುಕೊಂಡರೆ ದುಃಖದಿಂದ ಸಂಪೂರ್ಣವಾಗಿ ಹೊರಬಂದಂತೆಯೇ ಎಂದು ನಾನು ಹೇಳುತ್ತೇನೆ, ಅದನ್ನೇ ಪತ್ರೀಜಿಯವರು ಕೂಡ ಹೇಳುತ್ತಾರೆ.

ಅಂತಹ ಸ್ಥಿತಿ ನಮಗೆ ಬರಲೆಂದೇ ಮಾಣಿಕ್ಯೇಶ್ವರಿ ಮಾತೆ ಮೊಟ್ಟಮೊದಲು ನೀಡಿದ ಸಂದೇಶ "ನಿನ್ನನ್ನು ನೀನು ತಿಳಿಕೊ!" ಎಂದು. ಕಾರಣವೇನೆಂದರೆ, ನೀನು ನಿನ್ನನ್ನು ಕೇವಲ ಈ ದೇಹವೆಂದು ಅಂದುಕೊಳ್ಳುತ್ತಿದ್ದೀಯ. ನಿನಗೆ ಈ ದೇಹವು ಸುಖವಾಗಿರಬೇಕೆಂಬ ಭ್ರಾಂತಿ ಇರುತ್ತದೆ. ಸುಖವಾಗಿರಬೇಕೆಂದರೆ ಹಣ ಬೇಕು ಎಂಬ ಕಾರಣಕ್ಕೆ, ಎಷ್ಟು ಹಣ ಸಂಪಾದಿಸಿದರೆ ಅಷ್ಟು ಚೆನ್ನಾಗಿ ಸುಖವಾಗಿರಬಹುದು ಎಂಬ ಉದ್ದೇಶದಿಂದ ಸಂಪಾದನೆಗೆ ಪ್ರಾಮುಖ್ಯತೆ ನೀಡುವುದುಂಟು. ಆ ಸಂಪಾದನೆಗಾಗಿ ಮಾಡಬಾರದ ಕೆಲಸಗಳನ್ನು ಮಾಡುವುದು, ತಪ್ಪುಗಳನ್ನು ಮಾಡುವುದು, ಪಾಪಗಳನ್ನು ಮಾಡುವುದು, ಅಧರ್ಮವಾಗಿ ನಡೆದುಕೊಳ್ಳುವುದು, ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು

ಮಾಡಿದರೆ ಕೊನೆಗೆ ಏನಾಗುತ್ತದೆ?

ಅವುಗಳ ಫಲವಾಗಿ ಮತ್ತೆ ಜೀವನದಲ್ಲಿ ಕಷ್ಟಗಳು, ರೋಗಗಳು, ಬಾಧೆಗಳು, ಸಮಸ್ಯೆಗಳು, ಇಕ್ಕಟ್ಟುಗಳು ಹೀಗೆ ಎಷ್ಟೋ ಬರುತ್ತವೆ, ಆಗ ತಲ್ಲಣಿಸುತ್ತೀರಿ. ಮಾಡುವಾಗ ಚೆನ್ನಾಗಿಯೇ ಇರುತ್ತದೆ ಆದರೆ ಅದನ್ನು ಅನುಭವಿಸುವಾಗ ತುಂಬಾ ದುಃಖಕ್ಕೆ ಒಳಗಾಗುತ್ತೀರಿ. ಆದ್ದರಿಂದ ಮೊದಲು ನೀವು 'ಏಕೆ ಇಷ್ಟೊಂದು ತಪ್ಪುಗಳನ್ನು ಮಾಡುತ್ತಾ ಹಣ ಸಂಪಾದಿಸಬೇಕು?' ಎನ್ನುವುದನ್ನು ಆಲೋಚಿಸಬೇಕು. ಆದರೆ ಹಣ ಸಂಪಾದಿಸಬೇಡಿ ಎಂದು ಯಾರೂ ಹೇಳುವುದಿಲ್ಲ.

ಪತ್ರೀಜಿಯವರು ಕೂಡ ಅದನ್ನೇ ಹೇಳುತ್ತಾರೆ. ಅವರು ಹಣ ಸಂಪಾದಿಸಬೇಡಿ ಎಂದು ಹೇಳುವುದಿಲ್ಲ, ಸಂಸಾರ ಬೇಡ ಎಂದು ಹೇಳುವುದಿಲ್ಲ, ಸುಖಪಡಬೇಡಿ ಎಂದು ಹೇಳುವುದಿಲ್ಲ. ನಿನ್ನ ಬಳಿ ಇರುವುದರಲ್ಲಿ ನೀನು ಸುಖವಾಗಿರು. ಸಂಸಾರದೊಂದಿಗೆ ಇರು, ಸಂಸಾರದ ಸುಖಗಳನ್ನು ಅನುಭವಿಸು. ಅವು ಯಾವುವೂ ಬೇಡ ಎಂದು ಅವರು ಹೇಳುವುದಿಲ್ಲ, ಆದರೆ ಅವುಗಳಿಗಾಗಿ ನೀನು ತಪ್ಪುಗಳನ್ನು, ಪಾಪಗಳನ್ನು ಮಾಡಬೇಡ ಎನ್ನುತ್ತಾರೆ. ಅದು ನಿನ್ನ ಸುಖವನ್ನು ಹೆಚ್ಚಿಸುವುದರ ಬದಲು ಕೊನೆಗೆ ನಿನ್ನನ್ನು ದುಃಖದತ್ತ ಕೊಂಡೊಯ್ಯುತ್ತದೆ.

ಬಹಳಷ್ಟು ಜನರು ಸಂಪಾದಿಸಿದರೆ ಏನೋ ಸುಖಪಡಬಹುದು ಎಂದುಕೊಳ್ಳುತ್ತಾರೆ. ಆದರೆ ನೀನು ಅನುಭವಿಸುವ ಸುಖ ಸ್ವಲ್ಪವೇ, ಆದರೆ ನೀನು ಪಡುವ ದುಃಖ ಬಹಳ ಹೆಚ್ಚಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಮೊದಲು ಇದನ್ನು ತಿಳಿದುಕೊಳ್ಳಬೇಕು. "ನಿನ್ನನ್ನು ನೀನು ತಿಳಿದುಕೊ!" ಎಂದು ಹೇಳಿದ ಮಾಣಿಕ್ಯೇಶ್ವರಿ ಮಾತೆಯ ಸಂದೇಶವನ್ನು ಕೇಳಿ ಸುಮ್ಮನೆ ಬಿಟ್ಟುಬಿಡಬಾರದು. ಅವರು ಅದನ್ನು ಯಾಕೆ ಹೇಳುತ್ತಾರೆ? ನಮಗಾಗಿಯೇ, ನಮ್ಮ ಭವಿಷ್ಯಕ್ಕಾಗಿಯೇ!

ಎಲ್ಲರೂ ಬಂದು ಅಂತಹವರ ಕಾಲುಗಳ ಮೇಲೆ ಬೀಳುತ್ತಿರುತ್ತಾರೆ. "ಅಮ್ಮಾ ನೀವೇ ನಮ್ಮನ್ನು ಆದುರಿಸಬೇಕು(ಕಾಪಾಡಬೇಕು), ಆಶೀರ್ವದಿಸಿ, ಕರುಣಿಸಿ, ಕಾಪಾಡಿ, ರಕ್ಷಿಸಿ" ಎಂದು ಪ್ರಾರ್ಥಿಸಿದಾಗ, ಆಕೆ "ನಿನ್ನನ್ನು ನೀನು ತಿಳಿದುಕೊ!" ಎಂದರು. ಇಷ್ಟೊಂದು ಜನರು ಆಕೆಯ ಹತ್ತಿರ ಬರುತ್ತಿದ್ದರೆ, ಹೀಗೆ ಕೇಳುತ್ತಿದ್ದರೆ, ಪ್ರಾರ್ಥಿಸುತ್ತಿದ್ದರೆ ಅದಕ್ಕೊಂದು ಪರಿಹಾರ ಹೇಳಬೇಕಲ್ಲವೇ? ಅವರು ಬಯಸುವ ವಿಷಯಕ್ಕೆ ದಾರಿ ತೋರಿಸಬೇಕಲ್ಲವೇ? ಎಲ್ಲರೂ ಏನೆಂದುಕೊಳ್ಳುತ್ತಾರೆಂದರೆ, ಆಕೆ ಕೈ ಬೀಸಿದರೆ, ತಲೆಯ ಮೇಲೆ ಕೈ ಇಟ್ಟರೆ ಅಥವಾ ಕಾಲಿಗೆ ಬಿದ್ದಾಗ ಆಶೀರ್ವದಿಸಿದರೆ ತಮ್ಮ ಕಷ್ಟಗಳೆಲ್ಲಾ ಹೋಗುತ್ತವೆ ಎಂದು ಭಾವಿಸುತ್ತಾರೆ.

ಪತ್ರೀಜಿಯವರು ಏನೆಂದಿದ್ದಾರೆಂದರೆ? ಯಾರೂ ಯಾರ ದುಃಖವನ್ನೂ

ಹೋಗಲಾಡಿಸಲು ಸಾಧ್ಯವಿಲ್ಲ, ಯಾರ ದುಃಖಕ್ಕಾದರೂ ಅವರೇ ಕಾರಣ. ಅವರ ದುಃಖ ಹೋಗಬೇಕೆಂದರೆ ಅವರೇ ಪ್ರಯತ್ನ ಪಡಬೇಕು. ಮಹಾತ್ಮರು, ಮಹಾನುಭಾವರು, ಯೋಗಿಗಳು ದಾರಿ ತೋರಿಸುತ್ತಾರೆ ಅಷ್ಟೇ, ಅವರೇನೂ ನಿಮ್ಮ ಕಷ್ಟಗಳನ್ನು ಹೋಗಲಾಡಿಸುವುದಿಲ್ಲ. ಲೋಕದಲ್ಲಿರುವ ಸಾಮಾನ್ಯ ತಿಳುವಳಿಕೆ ಏನೆಂದರೆ, ನಾವು ಅವರನ್ನು ಆಶ್ರಯಿಸಿದರೆ ಅವರು ನಮ್ಮನ್ನು ಅನುಗ್ರಹಿಸುತ್ತಾರೆ, ಆ ಕಷ್ಟಗಳಿಂದ, ರೋಗಗಳಿಂದ, ಬಾಧೆಗಳಿಂದ ಹೊರಬರುವಂತೆ ಮಾಡುತ್ತಾರೆ ಎಂದುಕೊಳ್ಳುತ್ತಾರೆ. ಆದರೆ ಆ ಕಷ್ಟಗಳು ನಿನಗೆ ಏಕೆ ಬಂದಿವೆ ಎಂಬುದು ಅವರಿಗೆ ತಿಳಿದಿರುತ್ತದೆ, ಅದಕ್ಕಾಗಿಯೇ "ಆ ತಪ್ಪು ಕೆಲಸಗಳನ್ನು ಮಾಡಬೇಡಿ" ಎಂದು ಹೇಳುತ್ತಾರೆ.

ಅವರು ಹೇಳಿದಂತೆ ನೀವು ನಡೆದುಕೊಂಡರೆ ಖಂಡಿತವಾಗಿಯೂ ಆ ಕಷ್ಟಗಳಿಂದ ಹೊರಬರುತ್ತೀರಿ. ಭವಿಷ್ಯದ ಜೀವನದಲ್ಲಿ ಎಷ್ಟೋ ಬದಲಾವಣೆಗಳು ಬರುತ್ತವೆ. ಅವರಿಗೆ ಎಲ್ಲವೂ ತಿಳಿದಿರುತ್ತದೆ. ಅವರು "ಪೂರ್ಣ ಜ್ಞಾನಿಗಳು." ಪ್ರತಿಯೊಬ್ಬರ ಜೀವನ ಹಾಗೆ ಏಕಿದೆ? ಏಕೆ ಅವರ ಜೀವನ ಹಾಗಾಯಿತು? ಅಂತಹ ದುರ್ಭರವಾದ ಪರಿಸ್ಥಿತಿ ಏಕೆ ಎದುರಾಯಿತು ಎಂಬುದು ಅವರಿಗೆ ತಿಳಿದಿದೆ. ಅದಕ್ಕೇ ಅವರು ಸ್ಪಷ್ಟವಾಗಿ ಹೇಳುತ್ತಾರೆ. ಕನಿಷ್ಠ ಇಂದಿನಿಂದಾದರೂ ಸರಿಪಡಿಸಿಕೊಳ್ಳಿ ಎಂದು ಆ ಮಾರ್ಗವನ್ನೇ ಹೇಳುತ್ತಿರುತ್ತಾರೆ.

ಆದ್ದರಿಂದ ಅಂತಹವರು ಹೇಳುವ ಮಾತುಗಳನ್ನು ನೀವು ಬರೆದುಕೊಂಡು ಪುಸ್ತಕಗಳಲ್ಲಿ ಇಟ್ಟುಕೊಳ್ಳಬೇಕು, ಪ್ರತಿದಿನ ಓದಬೇಕು. ಅದರ ಮೇಲೆ ಅಧ್ಯಯನ ಮಾಡುವ ಪ್ರಯತ್ನ ಮಾಡುತ್ತಿರಬೇಕು. ಅಂತಹ ಸಂದೇಶಗಳನ್ನು ಹೇಳುವವರು ಯಾರಾದರೂ ಇದ್ದರೆ ಅವರ ಮಾತುಗಳನ್ನು ಕೇಳುತ್ತಿರಬೇಕು. ಕೇಳುತ್ತಾ ಇದ್ದರೆ ನಿಮಗೆ ಇನ್ನೂ ಹೆಚ್ಚಿನ ಅವಗಾಹನೆ (ತಿಳಿವಳಿಕೆ) ಉಂಟಾಗುತ್ತದೆ, ಅರ್ಥವಾಗುತ್ತಾ ಇರುತ್ತದೆ, ಮೆಲ್ಲಗೆ ಆಚರಣೆಯಲ್ಲಿ ತರಲು ಸಾಧ್ಯವಾಗುತ್ತದೆ.

ಮತ್ತೆ ಅವರೆಲ್ಲರೂ ಆ ಮಟ್ಟಕ್ಕೆ ಹೇಗೆ ಬಂದರು? ಎಂಬುದು ತಿಳಿದುಕೊಳ್ಳಬೇಕು. ಮಾಣಿಕ್ಯೇಶ್ವರಿ ಮಾತೆ 'ನಿನ್ನನ್ನು ನೀನು ತಿಳಿದುಕೊ!' ಎನ್ನುವ ಈ ಒಂದು ಮಾತನ್ನು ಎಷ್ಟಾದರೂ ವಿವರಿಸಬಹುದು.

ನೀವು ತಿಳಿದುಕೊಳ್ಳಲು ಪ್ರಯತ್ನಿಸಿದರೆ **'ನಾನು ಆತ್ಮ – ಈ ದೇಹವಲ್ಲ'** ಎಂಬುದು ಅರ್ಥವಾಗುತ್ತದೆ. ದೇಹಕ್ಕೋಸ್ಕರವೇ ಪಾಪಗಳನ್ನು ಮಾಡುತ್ತಿದ್ದಾರೆ. ಈ ದೇಹದ ಹೆಸರು, ಪ್ರಖ್ಯಾತಿಗಾಗಿ, ವೈಭವಕ್ಕಾಗಿ, ಸುಖಕ್ಕಾಗಿ, ಈ ದೇಹದ ಆರೋಗ್ಯಕ್ಕಾಗಿ, ದೇಹದ ಸೌಂದರ್ಯಕ್ಕಾಗಿ, ದೇಹದ ಸೌಷ್ಠವಕ್ಕಾಗಿ ಬೆಳಿಗ್ಗೆಯಿಂದ

ರಾತ್ರಿಯವರೆಗೆ ಮಾಡುವ ಕೆಲಸಗಳೆಲ್ಲವೂ ದೇಹಕ್ಕೋಸ್ಕರವೇ. ಇಷ್ಟಕ್ಕೂ ನೀನು ದೇಹವೇ ಅಂದರೆ, ಖಂಡಿತಾ ಅಲ್ಲ! ನೀನು ಆತ್ಮ.

ಆತ್ಮಕ್ಕೋಸ್ಕರ ಏನು ಮಾಡುತ್ತಿದ್ದೀರಿ? 'ಧ್ಯಾನ ಮಾಡುತ್ತಿದ್ದೇವೆ ಅಲ್ವಾ' ಎಂದು ಬಹಳಷ್ಟು ಜನರು ಹೇಳುತ್ತಾರೆ. ನಾನು ನೋಡುತ್ತಿದ್ದೇನೆ, ಸುಮಾರು 95% ಆ ಮಾಡುವ ಧ್ಯಾನವೆಲ್ಲವೂ ಕೂಡ ದೇಹಕ್ಕೋಸ್ಕರವೇ ಮಾಡುತ್ತಿದ್ದಾರೆ. ದೇಹಕ್ಕೆ ಯಾವೋ ಕಾಯಿಲೆಗಳು ಇರುತ್ತವೆ, ಸಮಸ್ಯೆಗಳು ಇರುತ್ತವೆ, ಕೋರಿಕೆಗಳು ಇರುತ್ತವೆ. ಧ್ಯಾನ ಮಾಡಿದರೆ ಅವೆಲ್ಲವೂ ನೆರವೇರುತ್ತವೆ ಎಂಬುದು ಅವರ ಉದ್ದೇಶ. ಆದ್ದರಿಂದ ಅವುಗಳಿಗಾಗಿ ಧ್ಯಾನ ಮಾಡುತ್ತಿರುತ್ತಾರೆ. ಆದರೆ 'ನಾನು ಆತ್ಮ' ಎಂದು ತಿಳಿದುಕೊಂಡು, ಆತ್ಮಕ್ಕೋಸ್ಕರ ಧ್ಯಾನ ಮಾಡುವವರು ಬಹಳ ಕಡಿಮೆ ಆತ್ಮಕ್ಕಾಗಿ ಧ್ಯಾನ ಮಾಡುವವರು ಆತ್ಮಜ್ಞಾನವನ್ನು ಪಡೆಯಲು ಬಯಸುತ್ತಾರೆ, ಅಷ್ಟೇ ಹೊರತು ದೇಹದ ಲಾಭಗಳನ್ನು ಪಡೆಯುವುದಕ್ಕಲ್ಲ.

"ನಮ್ಮ ಪರಿಸ್ಥಿತಿ ಏನು?" ಎಂದು ಜನರು ಮತ್ತೆ ಮತ್ತೆ ಕೇಳುತ್ತಿರುತ್ತಾರೆ. ಆದರೆ ನಿಮ್ಮ ಬಳಿ ಜ್ಞಾನವಿದ್ದರೆ, ಎಲ್ಲವೂ ನಿಮ್ಮ ಬಳಿ ಇದ್ದಂತೆಯೇ. ಆ ಜ್ಞಾನವಿಲ್ಲದಿದ್ದರೆ ಈ ಪ್ರಪಂಚದಲ್ಲಿ ಏನೇ ಇದ್ದರೂ ವ್ಯರ್ಥ. ಆದ್ದರಿಂದ ಜ್ಞಾನವನ್ನು ಸಂಪಾದಿಸುವ ಪ್ರಯತ್ನ ಮಾಡಬೇಕು. ಪತ್ರೀಜಿಯವರು ಹೇಳಿದ ಮಾರ್ಗದಲ್ಲಿ ನೀವು ಪಯಣಿಸಬೇಕು. ಇದು ಅನುಭವಕ್ಕೆ ಬರುವವರೆಗೂ, 'ನಿನ್ನನ್ನು ನೀನು ತಿಳಿದುಕೊ' ಎಂಬ ಮಾತನ್ನು ಪದೇ ಪದೇ ಓದುತ್ತಿರಬೇಕು. ನೀವು ಆತ್ಮವಾಗಿ ಜೀವಿಸುವವರೆಗೂ ಓದುತ್ತಲೇ ಇರಬೇಕು.

ಅದು ಹೇಗೆ? ಎಂದರೆ, ಹಿರಿಯರು ಹೇಳಿದ್ದನ್ನೇ ನಾನು ಈ ತರಗತಿಗಳಲ್ಲಿ ಹೇಳುತ್ತಿರುತ್ತೇನೆ. ನಾವು ಆತ್ಮವಾಗಿ ಜೀವಿಸುತ್ತಿದ್ದೇವಾ? ಇಲ್ಲವೇ? ಆ ಸ್ಥಿತಿಯಲ್ಲಿದ್ದೇವಾ? ಇಲ್ಲವೇ? ಎಂದು ತಿಳಿಯಲು, 'ವಸಿಷ್ಠರು' 'ಶ್ರೀರಾಮಚಂದ್ರನಿಗೆ' ಮಾಡಿದ ಬೋಧನೆ "ಆತ್ಮಜ್ಞಾನಿಯ ನಡವಳಿಕೆ ಹೇಗಿರುತ್ತದೆ?" ಎಂಬ ವಿಷಯದ ಬಗ್ಗೆ ನಾನು ಯೂಟ್ಯೂಬ್‌ನಲ್ಲಿ ಹೇಳಿದ್ದೇನೆ, ಅದನ್ನು ನೀವು ಕೇಳಿ. ಆ ರೀತಿಯಾಗಿ ನೀವು ಜೀವಿಸಲು ಸಾಧ್ಯವಾದರೆ, ನಿಜವಾಗಿಯೂ ನೀವು ಜ್ಞಾನವಂತರಾದಂತೆಯೇ ಲೆಕ್ಕ. ಆ ರೀತಿಯಾಗಿ ಸ್ವಲ್ಪಮಟ್ಟಿಗೆ ನೀವು ಜೀವಿಸಿದರೂ, ನಿಮ್ಮ ಬಳಿ ಸ್ವಲ್ಪ ಜ್ಞಾನವಿದೆಯೆಂದು ಅರ್ಥ. ಪೂರ್ಣವಾಗಿ ಆ ರೀತಿಯಲ್ಲಿ ಜೀವಿಸಿದರೆ ನೀವು "ಪೂರ್ಣ ಜ್ಞಾನಿಗಳು" ಎಂದರ್ಥ. ಸ್ವಲ್ಪವೂ ಹಾಗೆ ಜೀವಿಸದಿದ್ದರೆ, ನಿಮ್ಮ ಬಳಿ ಅಲ್ಪವೂ ಜ್ಞಾನವಿಲ್ಲ ಎಂದೇ ಅರ್ಥ.

ನಿಮ್ಮಲ್ಲಿ ಎಷ್ಟು ಜ್ಞಾನವಿದೆಯೋ ಅಷ್ಟು ನೀವು ಬೆಳವಣಿಗೆ ಹೊಂದುತ್ತಿದ್ದೀರಿ

ಎಂದರ್ಥ. ನೀವು ಆತ್ಮವಾಗಿ ಬೆಳೆಯುತ್ತಿದ್ದೀರಿ ಎನ್ನಲು ನೀವು ಸಂಪಾದಿಸಿದ ಜ್ಞಾನವೇ ಮಾನದಂಡ. ಆ ಜ್ಞಾನವೆಂಬುದು ನಿಮ್ಮ ನಡವಳಿಕೆಯ ಮೂಲಕ ತಿಳಿಯುತ್ತದೆ. ಆ ನಡವಳಿಕೆ ಹೇಗಿರಬೇಕು ಎಂಬುದನ್ನು ವಸಿಷ್ಠರು ತಿಳಿಸಿದ್ದಾರೆ. ಹಾಗೆಯೇ ಪತ್ರೀಜಿಯವರು ಕೂಡ ಒಂದು ಸಂದರ್ಭದಲ್ಲಿ **"ನಿನ್ನಲ್ಲಿ ಸಾಸಿವೆಯಷ್ಟೂ ದುಃಖವಿದ್ದರೂ, ನೀನು ಇನ್ನು ಅಜ್ಞಾನದಲ್ಲೇ ಇದ್ದೀಯ ಎಂದರ್ಥ"** ಎಂದು ಹೇಳಿದ್ದಾರೆ.

ಯಾವ ಸಂದರ್ಭದಲ್ಲಿ ಆಗಲಿ, ಯಾವ ವಿಷಯದಲ್ಲಿ ಆಗಲಿ, ಎಲ್ಲಿಯಾದರೂ ಸರಿಯೇ. ಸ್ವಲ್ಪ ಮಟ್ಟಿನ ದುಃಖವನ್ನು... ನೀವು ಅನುಭವಿಸುತ್ತಿದ್ದರೂ, ದುಃಖಪಡುತ್ತಿದ್ದರೂ ನೀವು ಇನ್ನೂ ಅಜ್ಞಾನದಲ್ಲಿದ್ದೀರಿ ಎಂದೇ ಅರ್ಥ! ಆದರೆ ಜ್ಞಾನಿ ಅಥವಾ ಪೂರ್ಣಜ್ಞಾನಿಯಾದವರಿಗೆ ದುಃಖವೇ ಇರುವುದಿಲ್ಲ ಎಂಬುದು ಅರ್ಥವಾಗುತ್ತದೆ. ಈ ವಿಷಯವನ್ನು ಅಸಡ್ಡೆ ಮಾಡಬಾರದು. ಯಾರು ಹೇಳಿದರೂ ಇದನ್ನೇ ಹೇಳುತ್ತಾರೆ. ಅಂತಹ ಮಹಾನ್ ವ್ಯಕ್ತಿಗಳು ಸುಮ್ಮನೆ ಹೇಳಿ ಹಗುರವಾಗಿ ಬಿಡುವುದಿಲ್ಲವಲ್ಲವೇ? ಈ ಒಂದು ಮಾತಿನಲ್ಲಿ ಎಂತಹ ಅದ್ಭುತವಾದ ಸಂದೇಶ ಅಡಗಿದೆ!

ಇನ್ನು ನೀವು ಅಸಲಿಗೆ ತಿಳಿಯಬೇಕಾದದ್ದು ಏನಿದೆ? ಆದ್ದರಿಂದ ನೀವು ಮಾಡುವ ಕೆಲಸಗಳು, ನಿಮ್ಮ ಮಾತುಗಳು ಮತ್ತು ಕೃತ್ಯಗಳಲ್ಲಿ ಎಲ್ಲದರಲ್ಲೂ "ನಾನು ಆತ್ಮ" ಎಂಬ ಭಾವನೆಯಿಂದಲೇ ಮಾಡುತ್ತಿರಬೇಕು. ಸಹಜವಾಗಿ ಎಷ್ಟೋ ಕಾರ್ಯಕ್ರಮಗಳು ನಿಮ್ಮ ಮನೆಯಲ್ಲಿ, ಕುಟುಂಬದಲ್ಲಿ, ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ನಡೆಯುತ್ತಿರುತ್ತವೆ. ನೀವು "ಆತ್ಮ" ಎನ್ನುವುದು ಅರ್ಥವಾದರೆ, ಆತ್ಮಕ್ಕೆ ಸಂಬಂಧಿಸಿದ ಧ್ಯಾನ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡುತ್ತೀರಿ.

ಒಂದು ವೇಳೆ ನೀವು "ನಾನು ದೇಹ" ಎಂಬ ಭಾವನೆಯಲ್ಲಿದ್ದರೆ, ಮದುವೆಗಳಿಗೆ ಮತ್ತು ಇತರ ಸಮಾರಂಭಗಳಿಗೆ ಪ್ರಾಮುಖ್ಯತೆ ನೀಡುತ್ತೀರಿ. ಅವುಗಳಿಗೇ ಹೋಗುತ್ತಿರುತ್ತೀರಿ. ಆದರೆ ನೀವು ಆತ್ಮ ಎಂದು ಅರ್ಥವಾದಾಗ, ನೀವು ಅವುಗಳನ್ನು ಅಷ್ಟಾಗಿ ಪಾಲಿಸುವುದಿಲ್ಲ; ಕೇವಲ ಧ್ಯಾನ ಕಾರ್ಯಕ್ರಮಗಳಿಗೇ ಹೋಗುತ್ತೀರಿ. ಜೀವನದ ಆಯ್ಕೆಗಳು ಯಾವ ಕೆಲಸ ಮಾಡಿದರೂ ಸಹ, ಪ್ರತಿಯೊಂದರಲ್ಲೂ ಇದು "ಆತ್ಮಕ್ಕೆ ಲಾಭವೇ ಅಥವಾ ಅಲ್ಲವೇ?" ಎಂದು ಯೋಚಿಸುತ್ತಿರುತ್ತೀರಿ. ಹಾಗೆಯೇ ಟಿವಿ ಮತ್ತು ಮೊಬೈಲ್ಗಳಲ್ಲಿ ಕಾರ್ಯಕ್ರಮಗಳು ಬರುತ್ತಿರುತ್ತವೆ. ಅವುಗಳನ್ನು ನೋಡುವಾಗ ಮನರಂಜನೆ ಮತ್ತು ಆನಂದ ಇರುತ್ತದೆ, ಆದರೆ "ನಾನು ಆತ್ಮ" ಎಂಬ ಅರಿವು ಇರುವವರು ಅವುಗಳನ್ನು

ಪಕ್ಕಕ್ಕೆ ಇಡುತ್ತಾರೆ. ಅವುಗಳಿಗೆ ಅಷ್ಟೊಂದು ಪ್ರಾಮುಖ್ಯತೆ ನೀಡುವುದಿಲ್ಲ. ಅವರು ಈ ಆತ್ಮಜ್ಞಾನಕ್ಕೆ ಸಂಬಂಧಿಸಿದ ಸಂದೇಶಗಳು ಮತ್ತು ಕಾರ್ಯಕ್ರಮಗಳ ಮೇಲೆ ಆಸಕ್ತಿ ತೋರಿಸುತ್ತಾರೆ. ಹಾಗೆಯೇ ಕಾದಂಬರಿಗಳು ಮತ್ತು ಪುಸ್ತಕಗಳು ಇರುತ್ತವೆ. "ನಾನು ಆತ್ಮ" ಎಂದು ಅರ್ಥ ಮಾಡಿಕೊಂಡವನು "ಆತ್ಮಜ್ಞಾನದ ಪುಸ್ತಕಗಳನ್ನು" ಓದುತ್ತಿರುತ್ತಾನೆ. "ನಾನು ದೇಹ" ಎಂದು ಅಂದುಕೊಳ್ಳುವವನು ದೇಹದ ಲಾಭಗಳು ಅಂದರೆ ನಿಮ್ಮ ಆರೋಗ್ಯ, ನಿಮ್ಮ ಸಂಪತ್ತು ನಿಮ್ಮ ಕೈಯಲ್ಲಿ – ಇಂತಹ ಪುಸ್ತಕಗಳ ಮೇಲೆ ಆಸಕ್ತಿ ತೋರಿಸುತ್ತಾನೆ. ನಾನು ಆತ್ಮಅಂದುಕೊಂಡವನು ಆತ್ಮ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳ ಮೇಲೆ ಆಸಕ್ತಿ ತೋರಿಸುತ್ತಾ ಇರುತ್ತಾನೆ. ಇಲ್ಲದಿದ್ದರೆ ಥಾಟ್ ಪವರ್ (ಆಲೋಚನಾ ಶಕ್ತಿ) ಎಂದೂ, ಮೈಂಡ್ ಪವರ್ (ಮಾನಸಿಕ ಶಕ್ತಿ) ಎಂದೂ "ಮನಸ್ಸಿಗೆ" ಸಂಬಂಧಿಸಿದ ಪುಸ್ತಕಗಳನ್ನು ಓದುತ್ತಾರೆ. ಆತ್ಮನೇ ನಾನು ಎಂಬ ತಿಳುವಳಿಕೆಗೆ ಬಂದವರು ಅಂತಹ ಪುಸ್ತಕಗಳ ಮೇಲೆ ಆಸಕ್ತಿ ತೋರಿಸುವುದಿಲ್ಲ.

ಆತ್ಮನೇ ನಾನು ಎಂಬ ಅವಗಾಹನೆ (ತಿಳಿವಳಿಕೆ) ಇರುವವರು ಯಾವುದು ಸಿಕ್ಕರೆ ಅದನ್ನು ತಿನ್ನುತ್ತಾರೆ. ಎಲ್ಲಿಯಾದರೂ ಹೊಂದಾಣಿಕೆಯಾಗಿ ಇರುತ್ತಾರೆ. ಎಸಿಯಲ್ಲೂ ಇರಬಲ್ಲರು, ಸಾಮಾನ್ಯವಾಗಿ ಇರಬಲ್ಲರು. ಈ ದೇಹವನ್ನು ದೇಹದ ಸುಖಗಳಿಗಾಗಿ ಬಳಸದೆ ಆತ್ಮನ ಲಾಭಕ್ಕೆ ಬೇಕಾದಂತಹ ಸಾಧನೆಗಳನ್ನು ಮಾಡುತ್ತಾರೆ. ಅವರ ಸಮಯವನ್ನು ಹೆಚ್ಚಾಗಿ ಆತ್ಮಕ್ಕಾಗಿಯೇ ಖರ್ಚು ಮಾಡುತ್ತಿರುತ್ತಾರೆ. ನೀನು ಯಾರೆಂದು ತಿಳಿದುಕೊಂಡಾಗ ಇವೆಲ್ಲವೂ ಯಾವಾಗಲೂ ನಡೆಯುತ್ತವೆ. ತುಂಬಾ ಜನರು 'ನಾನು ಆತ್ಮನೆಂದು ನನಗೆ ಗೊತ್ತು' ಎಂದು ಹೇಳುತ್ತಾರೆ, ಆದರೆ ನಡವಳಿಕೆ ಬದಲಾಗುವುದಿಲ್ಲ. ಅಂದರೆ ಅವರಿಗೆ ಇನ್ನೂ ಅದು ಅನುಭವಕ್ಕೆ ಬಂದಿಲ್ಲ, ಇನ್ನೂ ಅರ್ಥವಾಗಿಲ್ಲ ಎಂದರ್ಥ. ಅರ್ಥವಾದಂತೆಲ್ಲಾ ನಡವಳಿಕೆ ಬದಲಾಗುತ್ತಾ ಹೋಗುತ್ತದೆ.

ಅದಕ್ಕಾಗಿಯೇ ಮಾಣಿಕೇಶ್ವರಿ ಮಾತೆ "ನಿನ್ನನ್ನು ನೀನು ತಿಳಿದುಕೊ" ಎಂಬ ಈ ಸಂದೇಶವನ್ನು ನೀಡಿದ್ದಾರೆ. ನಮ್ಮನ್ನು ನಾವೇ ತಿಳಿದುಕೊಳ್ಳಬೇಕು. ಬೇರೆಯವರು ಯಾರು ತಿಳಿದುಕೊಳ್ಳುತ್ತಾರೆ? ನೀನು ಆತ್ಮ ಎಂಬ ವಿಷಯವನ್ನು ನಾನು ತಿಳಿದುಕೊಳ್ಳುತ್ತೇನೆ, ಅದರಿಂದ ನಿನಗೇನು ಪ್ರಯೋಜನ? ಅದನ್ನು ನೀನೇ ತಿಳಿದುಕೊಳ್ಳಬೇಕು. "ನಿನ್ನನ್ನು ನೀನು ತಿಳಿದುಕೊ" ಎಂಬುದನ್ನೇ ಅವರು ಹೇಳಿದರು. ಅದಕ್ಕಾಗಿಯೇ ಪತ್ರೀಜಿಯವರು ಹೇಳುವವನ್ನೆಲ್ಲಾ ನಾವು ಕುರುಡಾಗಿ ಅನುಸರಿಸಿ ಪ್ರಯತ್ನಿಸಿದರೆ ತಿಳಿದುಕೊಳ್ಳುತ್ತೇವೆ. ಆದ್ದರಿಂದ ನೀವು ಅವರು ಹೇಳಿದಂತೆ ಮಾಡಬೇಕು.

“ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಸೇವಿಸಬೇಡಿ”

ಇದು ಬಹಳ ಮುಖ್ಯವಾದ ವಿಷಯ. ಪತ್ರೀಜಿಯವರು ನಮಗೆ ಪದೇ ಪದೇ ಮಾಂಸಾಹಾರ ಬೇಡ ಎಂದು ಹೇಳುತ್ತಿರುತ್ತಾರೆ. ಏಕೆಂದರೆ ಇದು ರುಚಿಕರವಾದ, ಬಲವಾದ ಆಹಾರ ಎಂದು ಅಂದುಕೊಳ್ಳುತ್ತಾರೆ, ಆದರೆ ಅದು ಹಿಂಸೆಯಿಂದ ಕೂಡಿದ್ದಾಗಿದೆ. ಅಂತಹ ಆಹಾರವನ್ನು ಸೇವಿಸಬೇಡಿ ಎಂದು ಮಾಣಿಕ್ಯೇಶ್ವರಿ ಮಾತಾ ಹೇಳಿದ್ದಾರೆ.

ಮಾಂಸಾಹಾರವೆಂದರೆ ಕೋಳಿ, ಮೇಕೆ, ಮೀನುಗಳನ್ನು ಎಷ್ಟು ಹಿಂಸಿಸಬೇಕಾಗುತ್ತದೆ ಎಂದು ಒಮ್ಮೆ ನೋಡಿ. ನೀವು ಗಮನಿಸಿದರೆ, ಆ ಮೀನನ್ನಾಗಲಿ, ಆ ಮೇಕೆಯನ್ನಾಗಲಿ ಅಥವಾ ಆ ಕೋಳಿಯನ್ನಾಗಲಿ ಕೊಲ್ಲುವಾಗ ನೋಡಿದರೆ ಅವುಗಳನ್ನು ಕಾಲುಗಳ ಕೆಳಗೆ ಹಾಕಿ ತುಳಿಯುತ್ತಾರೆ, ಕುತ್ತಿಗೆ ತಿರುಗಿಸುತ್ತಾರೆ. ಆ ಗಂಟಲನ್ನು ಕೊಯ್ದು ಡಬ್ಬದಲ್ಲಿ ಹಾಕುತ್ತಾರೆ. ಅದು ಒದ್ದಾಡಿ ಒದ್ದಾಡಿ ಸಾಯುತ್ತದೆ. ಅದೇ ಹಿಂದೂಗಳು ಯಾವುದಾದರೂ ಕುರಿ ಅಥವಾ ಮೇಕೆಯಾದರೆ ಅದರ ತಲೆ ಕಡಿಯುತ್ತಾರೆ. ಮುಸ್ಲಿಮರು ಆದರೆ ಅದನ್ನು ಅರ್ಧ ಕೊಯ್ದು ಬಿಡುತ್ತಾರೆ. ಅದು ರಕ್ತ ಸುರಿಸುತ್ತಾ, ಆ ರಕ್ತದಲ್ಲೇ ಹಾಗೆಯೇ ಒದ್ದಾಡುತ್ತಾ ಒಂದು ಅರ್ಧ ಗಂಟೆ ಎಂತಹ ನರಕವನ್ನು ಅನುಭವಿಸುತ್ತದೆ.

ನಿಜವಾಗಿಯೂ ನೋಡಿ, ನಿಮ್ಮ ಬೆರಳು ಕತ್ತರಿಸಿದರೆ ಎಷ್ಟು ನೋವಾಗುತ್ತದೆ. ಅದಕ್ಕೂ ಕೂಡ ನೋವು ಇರುವುದರಿಂದಲೇ ಹಾಗೆ ಗಿಲಗಿಲನೆ ಒದ್ದಾಡುತ್ತದೆ. ಅಷ್ಟು ಹಿಂಸೆ ಮಾಡಿದರೇ ತಾನೇ ನಿಜವಾಗಿ ಆ ಆಹಾರ ಬಂದಿದೆ, ಆದ್ದರಿಂದ ಅಂತಹ ಹಿಂಸೆಯಿಂದ ಕೂಡಿದ ಆಹಾರವನ್ನು ಆಕೆ (ಮಾಣಿಕೇಶ್ವರಿ ಮಾತಾ) ತಿನ್ನಬೇಡಿ ಎಂದು ಹೇಳಿದ್ದಾರೆ.

ಏಕೆಂದರೆ ಆಕೆ ಒಬ್ಬ ಶ್ರೇಷ್ಠ ಯೋಗಿನಿ ಆದ್ದರಿಂದ ಆಕೆಗೆ ತಿಳಿಯುತ್ತದೆ. ದೊಡ್ಡ ದೊಡ್ಡವರು ಹೇಳುವಂತಹ ಸಂದೇಶಗಳೆಲ್ಲವೂ ಆಕೆಗೆ ತಿಳಿದಿವೆ. ಆದ್ದರಿಂದ ಅಂತಹ ಕೆಲಸಗಳನ್ನು ನೀವು ಮಾಡುವುದರಿಂದ, ಅಂತಹ ಹಿಂಸೆಯನ್ನೇ ನೀವು ಅನುಭವಿಸಬೇಕಾಗುತ್ತದೆ, ಅಂತಹ ನರಕವನ್ನೇ ನೀವು ಅನುಭವಿಸಬೇಕಾಗುತ್ತದೆ. ಆದ್ದರಿಂದ ನೀವು ಅಂತಹ ಹಿಂಸೆಯನ್ನು ಅನುಭವಿಸಬಾರದು ಎಂಬ ಕಾರಣಕ್ಕಾಗಿ ಆಕೆ ಈ ಸಂದೇಶವನ್ನು ನೀಡಿದ್ದಾರೆ.ಏಕೆಂದರೆ ಆಕೆಯ ಹತ್ತಿರಕ್ಕೆ ಬಂದವರನ್ನು ಆಕೆಯು ಎಷ್ಟುಹೊತ್ತು ಅವರು ಒಳ್ಳೆಯದನ್ನೇ ಬಯಸುತ್ತಾರೆ, ನಿಮ್ಮ ಹಿತವನ್ನೇ

ಕೋರುತ್ತಾರೆ. ಅವರು ನಿಮ್ಮ ಲಾಭವನ್ನೇ ಇಚ್ಛಿಸುತ್ತಾರೆ ಅಷ್ಟೇ ಹೊರತು ಸುಮ್ಮನೆ ಯಾವುದೋ ಒಂದನ್ನು ಹೇಳುವುದಿಲ್ಲ. ಈ ವಿಷಯ ಮುಖ್ಯವಾಗಿ ಮಾಂಸಾಹಾರ ಸೇವಿಸುವವರಿಗೆ ತಿಳಿದಿರುವುದಿಲ್ಲ. ಸಾಮಾನ್ಯವಾಗಿ ಅವರು ಏನು ಅಂದುಕೊಳ್ಳುತ್ತಾರೆ ಎಂದರೆ ತಮ್ಮ ತಂದೆ, ತಾತ, ಮುತ್ತಾತಂದಿರ ಕಾಲದಿಂದಲೂ ಇದು ಒಂದು ಸಂಪ್ರದಾಯವಾಗಿ ನಡೆದುಕೊಂಡು ಬಂದಿದೆ, ಅವರು ಮಾಡಿದ್ದನ್ನೇ ತಾವು ಅನುಸರಿಸುತ್ತಿದ್ದೇವೆ ಎಂದು ಭಾವಿಸುತ್ತಾರೆ. ಆದ್ದರಿಂದಲೇ ಇದೊಂದು 'ಬಲವರ್ಧಕ ಆಹಾರ' ಎಂಬ ಭ್ರಮೆಯಲ್ಲಿರುತ್ತಾರೆ.

ಆದರೆ, ಈ ಪ್ರಕ್ರಿಯೆಯಲ್ಲಿ ನಾನು ಒಂದು ಜೀವಿಗೆ ಹಿಂಸೆ ನೀಡುತ್ತಿದ್ದೇನೆ, ನೋವುಂಟು ಮಾಡುತ್ತಿದ್ದೇನೆ, ಕ್ರೂರವಾಗಿ ಕೊಲ್ಲುತ್ತಿದ್ದೇನೆ ಮತ್ತು ಅದರ ಫಲವನ್ನು ಮುಂದೆ ನಾನೇ ಅನುಭವಿಸಬೇಕಾಗುತ್ತದೆ ಎಂಬ ಅರಿವು ಅವರಿಗೆ ಇರುವುದಿಲ್ಲ. ಏಕೆಂದರೆ ಮಾಣಿಕ್ಯೇಶ್ವರಿ ಮಾತೆಯವರಂತಹ ಉನ್ನತ ಸ್ಥಿತಿಗೆ ತಲುಪಿದವರು ಇವೆಲ್ಲವನ್ನೂ ಅರಿತಿದ್ದಾರೆ. ಅವರು ತಮ್ಮ ಕಳೆದ ಜನ್ಮಗಳನ್ನು ಮಾತ್ರವಲ್ಲದೆ, ಎಲ್ಲರ ಕಳೆದ ಜನ್ಮಗಳನ್ನೂ ತಿಳಿದುಕೊಳ್ಳಬಲ್ಲರು. ಅಷ್ಟೇ ಅಲ್ಲದೆ, ಯಾವ ಯಾವ ಜನ್ಮಗಳಲ್ಲಿ ಯಾರು ಎಂತಹ ಕರ್ಮಗಳನ್ನು ಮಾಡಿದ್ದಾರೆ, ಅದರ ಫಲವಾಗಿ ಈಗ ಎಂತಹ ಕರ್ಮಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಮುಂದೆ ಏನನ್ನು ಅನುಭವಿಸಲಿದ್ದಾರೆ ಎಂಬುದು ಅವರಿಗೆ ತಿಳಿದಿದೆ.

ಅಂತಹ ದುಸ್ಥಿತಿ ಯಾರಿಗೂ ಬರಬಾರದು ಎಂಬ ಕಾರಣಕ್ಕೇ ಅವರು ಈ ಮಾತುಗಳನ್ನು ಹೇಳುತ್ತಾರೆ. ಎಷ್ಟೋ ಜನ್ಮಗಳು ಕಳೆದ ನಂತರ ಮತ್ತು ಎಷ್ಟೋ ಸಾಧನೆಗಳನ್ನು ಮಾಡಿದ ನಂತರವಷ್ಟೇ ಅವರು ಈ ಉನ್ನತ ಸ್ಥಿತಿಗೆ ಬಂದಿರುತ್ತಾರೆ. ಏನನ್ನೂ ಮಾಡದೆ ಅವರು ಈ ಮಟ್ಟಕ್ಕೆ ಬಂದಿಲ್ಲವಲ್ಲವೇ? ಆದ್ದರಿಂದಲೇ, ಅವರಿಗೆ ಸತ್ಯದ ಅರಿವಿರುವುದರಿಂದಲೇ ಯಾರಿಗೂ ನಷ್ಟವಾಗಬಾರದು ಎಂದು ಎಚ್ಚರಿಸುತ್ತಿರುತ್ತಾರೆ. **"ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಸೇವಿಸಬೇಡಿ" ಎಂದು ಮಾಣಿಕ್ಯೇಶ್ವರಿ ಮಾತೆ ಸ್ಪಷ್ಟವಾಗಿ ಹೇಳಿದ್ದಾರೆ.**

ಬಲ ಮತ್ತು ಆಹಾರದ ಕುರಿತಾದ ಪ್ರಶ್ನೆ: ಬಹಳಷ್ಟು ಜನರು "ಮಾಂಸ ತಿಂದರೆ ಮಾತ್ರ ಬಲ ಬರುತ್ತದೆ, ಇಲ್ಲದಿದ್ದರೆ ಕೆಲಸ ಮಾಡಲು ಶಕ್ತಿ ಎಲ್ಲಿಂದ ಬರುತ್ತದೆ?" ಎಂದು ಕೇಳುತ್ತಾರೆ. ಅಂದರೆ ಮಾಂಸವೇ ಬಲ ಎಂದು ಅವರು ಭಾವಿಸುತ್ತಾರೆ. ಆದರೆ ಸ್ವಲ್ಪ ಯೋಚಿಸಿ ನೋಡಿ. ಸಸ್ಯಾಹಾರ ಸೇವಿಸುವವರೆಲ್ಲರೂ ಕೆಲಸ ಮಾಡುತ್ತಿಲ್ಲವೇ? ಅವರೆಲ್ಲರೂ ಮಂಚದ ಮೇಲೆ ಮಲಗಿದ್ದಾರೆಯೇ? ಎಷ್ಟೋ ಜನ ಸಸ್ಯಾಹಾರಿಗಳಿಲ್ಲವೇ? ಅವರೆಲ್ಲರೂ ತಮ್ಮ ಕೆಲಸಗಳನ್ನು ತಾವು

ಮಾಡಿಕೊಳ್ಳುತ್ತಿಲ್ಲವೇ? ಮಾಡಿಕೊಳ್ಳುತ್ತಿದ್ದೀರಲ್ಲವೇ? ಮತ್ತೇ ಹಾಗಿರುವಾಗ ಏಕೆ ಜೀವಿಸಬಾರದು?

ನೋಡಿ, ಪ್ರಾಣಿಗಳಲ್ಲಿ ನಾವು ಗಮನಿಸಿದರೆ ಸಸ್ಯಾಹಾರಿ ಪ್ರಾಣಿಗಳಾದ ಆನೆ, ಒಂಟೆ, ಎತ್ತು, ಎಮ್ಮೆ – ಇವುಗಳಲ್ಲಿ ಯಾವುದನ್ನೇ ತೆಗೆದುಕೊಂಡರೂ ಅವು ಎಷ್ಟು ಬಲಶಾಲಿಯಾಗಿರುತ್ತವೆ! ಇವೆಲ್ಲವೂ ಸಸ್ಯಾಹಾರಿ ಪ್ರಾಣಿಗಳೇ ಅಲ್ಲವೇ? ಅಂದರೆ ಬಲ ಎನ್ನುವುದು ಮಾಂಸದಲ್ಲಿಲ್ಲ. ಅದನ್ನು ನೋಡಿ ನಾವು ತಿಳಿದುಕೊಳ್ಳಬೇಕು. ಸಸ್ಯಾಹಾರ ಸೇವಿಸುತ್ತಿದ್ದರೂ ಬಲಶಾಲಿಯಾಗಿರುವ ಪ್ರಾಣಿಗಳಿವೆ.

ಆದ್ದರಿಂದ, ಮಾಂಸ ತಿನ್ನದಿದ್ದರೆ ಬಲವಿರುವುದಿಲ್ಲ ಎಂಬುದು ಬರಿ ಅಪನಂಬಿಕೆ (ಭ್ರಮೆ). ಮೊದಲಿನಿಂದಲೂ ಹಿರಿಯರು ಆ ರೀತಿ ಮಾತನಾಡುತ್ತಾ ಬಂದುದರಿಂದ ಜನರ ಮನಸ್ಸಿನಲ್ಲಿ ಅದು ಗಾಢವಾಗಿ ಬೇರೂರಿದೆ. ಮಾಂಸ ತಿಂದರೆ ಮಾತ್ರ ನಾವು ಏನನ್ನಾದರೂ ಮಾಡಬಲ್ಲೆವು, ಇಲ್ಲದಿದ್ದರೆ ಇಲ್ಲ ಎಂದುಕೊಳ್ಳುತ್ತಾರೆ. ಆದರೆ ಅದು ಇಲ್ಲದಿದ್ದರೂ ಅದಕ್ಕಿಂತ ಅದ್ಭುತವಾಗಿ ಜೀವಿಸಬಹುದು.

=============**ಮಾಂಸಾಹಾರದ ಪರಿಣಾಮಗಳು**=============

- ☛ **ಮಾಂಸ ತಿನ್ನುವುದರಿಂದ ಬುದ್ಧಿ ಮಂದವಾಗುತ್ತದೆ.**
- ☛ **ತಿಳಿವಳಿಕೆ ನಶಿಸುತ್ತದೆ ಮತ್ತು ಆಲೋಚನಾ ವಿಧಾನ ಬದಲಾಗುತ್ತದೆ.**
- ☛ **ಹಿಂಸಾ ಪ್ರವೃತ್ತಿ ಹೆಚ್ಚಾಗುತ್ತದೆ.**
- ☛ **ರಜೋಗುಣ ಹೆಚ್ಚಾಗಿ, ಅನೇಕ ರೀತಿಯ ಅನಾಹುತಗಳು ಸಂಭವಿಸುತ್ತವೆ.**
- ☛ **ಆವೇಶಕ್ಕೊಳಗಾಗುವುದು ಮತ್ತು ಸುಮ್ಮ ಸುಮ್ಮನೆ ಜಗಳವಾಡುವುದು.**

ಮಾಂಸಾಹಾರ ಸೇವನೆಯಿಂದಲೇ ಹೆಚ್ಚು ನಡೆಯುತ್ತವೆ. ಅದಕ್ಕಾಗಿಯೇ ಹಿರಿಯರು ಅಂತಹ ಆಹಾರ ಬೇಡ ಎಂದು ಹೇಳುತ್ತಿರುತ್ತಾರೆ. ಅಷ್ಟೇ ಅಲ್ಲ, ಬಹಳಷ್ಟು ಮಂದಿಗೆ ಅದೊಂದು ರುಚಿಕರವಾದ ಆಹಾರ ಎಂದು ಅನಿಸುತ್ತದೆ. ಆ ಆಹಾರವನ್ನು ನೋಡಿದ ಕೂಡಲೇ ಅವರ ಬಾಯಲ್ಲಿ ನೀರೂರುತ್ತದೆ.

ನಿಜವಾದ ರುಚಿ ಎಲ್ಲಿದೆ?: ನೀವು ಗಮನಿಸಿದರೆ, ಆ ಮಾಂಸಾಹಾರದ ಜೊತೆಗೇ ಬಿರಿಯಾನಿ ಎಂದು ಭಾವಿಸುತ್ತಾರೆ. ಆದರೆ ಒಮ್ಮೆ ಮಾಂಸದ ತುಂಡುಗಳಿಲ್ಲದೆ ಬಿರಿಯಾನಿ ಮಾಡಿ ತಿಂದು ನೋಡಿ. ಅದು ಕೂಡ ರುಚಿಯಾಗಿರುತ್ತದೆ ಅಲ್ಲವೇ? ಸಸ್ಯಾಹಾರದಲ್ಲಿ ಎಷ್ಟು ಬಗೆಯ ರುಚಿಗಳಿವೆ? ಎಷ್ಟು ವಿಧದ ಅಡುಗೆಗಳನ್ನು ಮಾಡಬಹುದು? ಆದ್ದರಿಂದ ಮಾಂಸವೇ ರುಚಿ ಎಂಬುದು ಕೇವಲ ಭ್ರಮೆಯಷ್ಟೆ. ಆ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಸಿಸಿ, ಕೊಂದು, ನಾನಾ ರೀತಿಯಲ್ಲಿ

ಚಿತ್ರಹಿಂಸೆ ನೀಡಿ ಮಾಡುವ ಕೆಲಸದ ಫಲವಾಗಿ, ಮರಳಿ ನೀವು ರೋಗಗಳ ರೂಪದಲ್ಲಿ ನರಕವನ್ನು ಅನುಭವಿಸುತ್ತೀರಿ. ಇವೆಲ್ಲವನ್ನೂ ಮಾಡುವ ಬದಲು ಸಸ್ಯಾಹಾರವನ್ನು ಸೇವಿಸುತ್ತಾ ನೆಮ್ಮದಿಯಾಗಿ ಜೀವಿಸಬಹುದು ಅಲ್ಲವೇ?

ಅದಕ್ಕಾಗಿಯೇ ಹಿರಿಯರು ಹಿಂಸೆಯಿಂದ ದೂರವಿರಬೇಕು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಆ ಆಹಾರದಲ್ಲಿ ಹಿಂಸೆ ಅಡಗಿದೆ. ಹೊರಗಡೆ ಹೋಟೆಲ್ಗಳಿಗೆ ಹೋಗಿ ಕುಳಿತರೆ ಪ್ಲೇಟ್ನಲ್ಲಿ ತಂದು ಬಡಿಸುತ್ತಾರೆ. ಅದನ್ನು ಆಹಾರವಾಗಿ ಸೇವಿಸುತ್ತಿರುತ್ತಾರೆ, ಆದರೆ ಒಳಗಡೆ ಹೋಗಿ ನೋಡಿದರೆ ಎಷ್ಟು ಘೋರವಾಗಿ ಅವುಗಳನ್ನು ಕೊಲ್ಲುತ್ತಿರುತ್ತಾರೆ ಎಂಬುದು ನಿಮಗೆ ತಿಳಿಯುತ್ತದೆ. ಮದುವೆಗಳಲ್ಲಿ, ಪಾರ್ಟಿಗಳಲ್ಲಿ ನೋಡಿದರೆ ಪ್ಲೇಟ್ನಲ್ಲಿಟ್ಟು ಬಡಿಸುತ್ತಿದ್ದರೆ ನೋಡಲು ಚೆನ್ನಾಗಿರುತ್ತದೆ. ಅದರಲ್ಲಿ ಮಸಾಲೆಗಳನ್ನೆಲ್ಲಾ ಹಾಕಿದರೆ ತುಂಬಾ ರುಚಿಯಾಗಿಯೂ ಇರುತ್ತದೆ. ಆದರೆ ಒಂದೇ ಒಂದು ಬಾರಿ ಅವುಗಳನ್ನು ತಯಾರಿಸುವ ಜಾಗಕ್ಕೆ ಹೋಗಿ ನೋಡಿದರೆ, ಆ ಕುರಿಗಳನ್ನು, ಮೇಕೆಗಳನ್ನು, ಕೋಳಿಗಳನ್ನು ಎಷ್ಟು ಘೋರವಾಗಿ ಕೊಲ್ಲುತ್ತಿದ್ದಾರೆ ಎಂಬುದು ಕಾಣಿಸುತ್ತದೆ.

ಅರೇ! ಆನಂದಕ್ಕಾಗಿ ಅವುಗಳನ್ನು ಇಷ್ಟೊಂದು ಹಿಂಸಿಸಬೇಕಾ ಎಂಬುದು ಆಗ ಅರ್ಥವಾಗುತ್ತದೆ. ನಿಜವಾಗಿ ಬಹಳಷ್ಟು ಜನರು ಆಹಾರವನ್ನು ನೋಡಿ ತಿನ್ನುತ್ತಾರೆ, ಆದರೆ ಅದು ಹೇಗೆ ತಯಾರಾಗುತ್ತದೆ ಎಂದು ನೋಡಿದರೆ ಬಹಳಷ್ಟು ಜನರಿಗೆ ತಿನ್ನಲು ಸಾಧ್ಯವಾಗುವುದಿಲ್ಲ. ಈಗ ತಿನ್ನುವವರಲ್ಲಿ 50% ಜನರು ತಕ್ಷಣವೇ ಬಿಟ್ಟುಬಿಡುತ್ತಾರೆ.

ಅಷ್ಟೇಕೆ, ನಿಮ್ಮ ಮನೆಯಲ್ಲಿ ಕೋಳಿ ಇದ್ದಾಗ ನೆಂಟರು ಬಂದಾಗ ಆ ಕೋಳಿಯನ್ನು ಕೊಲ್ಲಲು ಪ್ರಯತ್ನಿಸಿದರೆ, ಮನೆಯಲ್ಲಿನ ಸಣ್ಣ ಮಕ್ಕಳ ಎದುರಿಗೆ ಅದನ್ನು ಕೊಲ್ಲಲು ನೋಡಿ. ಅದು ಹೇಗೆ ಒದ್ದಾಡುತ್ತದೆ ಎಂಬುದನ್ನು ನೋಡಿ ಅವರು ಕೂಡ ಬೆಚ್ಚಿಬೀಳುತ್ತಾರೆ. 'ಅಮ್ಮೋ... ಬಾಬೋಯ್' ಎನ್ನುತ್ತಾರೆ, 'ಬೇಡ ಬೇಡ' ಎನ್ನುತ್ತಾರೆ, 'ಕೊಲ್ಲಬೇಡಿ' ಎನ್ನುತ್ತಾರೆ.

ಅಲ್ಲಿಯವರೆಗೂ ಅವರು ಆ ಬಾತುಕೋಳಿಯೊಂದಿಗೆ, ಆ ಮೊಲದೊಂದಿಗೆ, ಆ ಕೋಳಿಯೊಂದಿಗೆ, ಆ ಮೇಕೆಯೊಂದಿಗೆ ಆಟವಾಡಿಕೊಂಡಿರುತ್ತಾರೆ. ಅದನ್ನು ಕೊಲ್ಲುತ್ತಿದ್ದರೆ ಆ ಮಗು ಎಷ್ಟು ಭಯಪಡುತ್ತಾ ಅಳುತ್ತಾನೆ, 'ಬೇಡ' ಎನ್ನುತ್ತಾನೆ. 'ನಿನಗೆ ತಿಳಿಯುವುದಿಲ್ಲ! ನೀನು ಒಳಗೆ ಹೋಗು' ಎನ್ನುತ್ತಾರೆ. ಅವರು ಮೊದಮೊದಲು ಹಾಗೆಯೇ ಇರುತ್ತಾರೆ. ಸ್ವಲ್ಪ ಬೆಳೆಯುತ್ತಾ ಹೋದಂತೆ, ನೋಡುತ್ತಾ ಹೋದಂತೆ ಸ್ಪಂದನೆ ಇರುವುದಿಲ್ಲ, ಕೆಲವು ಕಾಲ ಕಳೆಯುವಷ್ಟರಲ್ಲಿ

‘ನಾನೇ ಕೊಲ್ಲುತ್ತೇನೆ’ ಎನ್ನುತ್ತಾನೆ. ಅಂದರೆ ಮೊಟ್ಟಮೊದಲು ಹಾಗಿದ್ದ ಮಗು ಹೇಗೆ. ಅವನು ಹಾಗೆಯೇ ತಯಾರಾದನು. ಇದಕ್ಕೆ ಯಾರು ಕಾರಣ? ತಂದೆ–ತಾಯಿಗಳೇ ಅಲ್ವಾ? ಅವರೇ ಅವನನ್ನು ಹಾಗೆ ಮಾಡಿದರು.

ಅದಕ್ಕಾಗಿಯೇ ಸಣ್ಣ ಮಕ್ಕಳನ್ನು ದೇವರಿಗೆ ಹೋಲಿಸುತ್ತಾರೆ. ಅಂತಹ ದೈವ ಸ್ವರೂಪಿಯಾದ ಮಗು ಯಾವುದನ್ನಾದರೂ ನೋಡಿ ಚಡಪಡಿಸುತ್ತಿದೆ ಎಂದರೆ, ಅದು ದೇವರಿಗೆ ಇಷ್ಟವಿಲ್ಲ ಎಂದೇ ಅರ್ಥ. ಮಗುವನ್ನು ದೇವರಿಗೆ ಹೋಲಿಸಿದಾಗ, ಆ ಹಿಂಸೆಯನ್ನು ನೋಡಿ ಮಗು ತಲ್ಲಣಿಸುತ್ತಿದೆ ಎಂದರೆ ದೇವರು ಅದನ್ನು ಒಪ್ಪುತ್ತಿಲ್ಲ ಎಂದೇ ತಾನೇ ಅರ್ಥ! ಅಂತಹ ಕೆಲಸ ಮಾಡಬಾರದು ಎಂದೇ ಅದರ ಅರ್ಥ. “ನಿಮಗೇನು ತಿಳಿಯದು” ಎನ್ನುತ್ತಾರೆ. ಆದರೆ ಈ ಮಗುವಿಗೆ ತಿಳಿಯದ ವಿಷಯ ಇವರಿಗೆ ತಿಳಿಯುತ್ತದೆಯೇ? ದೈವ ಸ್ವರೂಪಿಯಾದ ಮಗುವಿಗೆ ತಿಳಿಯದ ವಿಷಯ ಇವರಿಗೆ ಏನು ಗೊತ್ತು? ಮಕ್ಕಳು ತುಂಬಾ ಮುಗ್ಧರು. ಏಕೆಂದರೆ ಅವರಲ್ಲಿ ದೈವಿಕ ಲಕ್ಷಣಗಳು ಇರುತ್ತವೆ, ಆದ್ದರಿಂದ ಅವರಿಗೆ ಮಾಯೆ–ಮರ್ಮಗಳು ತಿಳಿಯುವುದಿಲ್ಲ. ಇದ್ದದ್ದನ್ನು ಇದ್ದಂತೆಯೇ ಒಪ್ಪಿಕೊಳ್ಳುತ್ತಾರೆ. ಯಾರಾದರೂ ಬಂದಾಗ “ನಿಮ್ಮ ತಂದೆ ಇದ್ದಾರಾ?” ಎಂದು ಕೇಳಿದರೆ, “ಇದ್ದಾರೆ” ಎನ್ನುತ್ತಾರೆ. ಒಳಗಡೆ ಹೋಗಿ “ಡ್ಯಾಡಿ, ನಿಮಗಾಗಿ ಯಾರೋ ಬಂದಿದ್ದಾರೆ” ಎನ್ನುತ್ತಾರೆ. “ನಾನಿಲ್ಲ ಎಂದು ಹೇಳು” ಎಂದು ತಂದೆ ಹೇಳಿದರೆ, ಮಗು ಹೊರಗೆ ಬಂದು “ನಾನಿಲ್ಲ ಎಂದು ಹೇಳಲು ಅಪ್ಪ ಹೇಳಿದರು” ಎಂದು ಹೇಳುತ್ತದೆ. ಏಕೆಂದರೆ ಆ ಮಗುವಿಗೆ ಇನ್ನೂ ಆ ಮಾಯೆ ಅಥವಾ ಸುಳ್ಳು ಹೇಳುವುದು ತಿಳಿಯದು. ಅವರು ಮಲಗಿದ್ದಾಗ ಫೋನ್ ಬಂದು “ಡ್ಯಾಡಿ ಇದ್ದಾರಾ?” ಎಂದು ಕೇಳಿದರೆ, ಫೋನ್ನಲ್ಲೂ ಕೂಡ “ನಾನಿಲ್ಲ ಎಂದು ಹೇಳಲು ಹೇಳಿದರು” ಎಂದೇ ಮಗು ಹೇಳುತ್ತದೆ. ಇವೆಲ್ಲವನ್ನೂ ನಾವು ಏಕೆ ಚರ್ಚಿಸುತ್ತಿದ್ದೇವೆ ಎಂದರೆ, ಆ ಸಣ್ಣ ಮಕ್ಕಳಲ್ಲಿ ದೈವಿಕ ಲಕ್ಷಣಗಳಿವೆ. ಅವರಿಗೆ ಯಾವುದೇ ಮಾಯೆ ಅಥವಾ ಕಪಟ ತಿಳಿಯದು. ಅಂತಹವರು ಚಡಪಡಿಸುತ್ತಿದ್ದಾರೆ ಎಂದರೆ ಅಲ್ಲಿ ದೇವರಿಗೆ ಇಷ್ಟವಿಲ್ಲ ಎಂದೇ ಅರ್ಥ! ಅಂತಹ ಹಿಂಸೆ ಮಾಡಿ ಅದನ್ನು ಆಹಾರವಾಗಿ ಹೇಗೆ ತೆಗೆದುಕೊಳ್ಳುತ್ತಾರೆ? ಅಂತಹ ಆಹಾರವನ್ನು ಸೇವಿಸಬಾರದು ಎಂದು ಮಾಣಿಕ್ಯೇಶ್ವರಿ ಮಾತೆ ಹೇಳಿದ್ದಾರೆ. ಇವೆಲ್ಲವನ್ನೂ ನೀವು ತಿಳಿದುಕೊಳ್ಳಬೇಕು. ಇದರಲ್ಲಿ ಎಷ್ಟೋ ಅನರ್ಥಗಳಿವೆ. ವಾಸ್ತವವಾಗಿ ಈ ಮಾಂಸಾಹಾರದ ಬಗ್ಗೆ ನಾವು ಎಷ್ಟೋ ವಿಷಯಗಳನ್ನು ಚರ್ಚಿಸಿದ್ದೇವೆ. ಯೂಟ್ಯೂಬ್ನಲ್ಲಿ ನೋಡಬಹುದು.

ದೇವರಿಗೆ ದಯೆ ಇಲ್ವಾ? ದೇವರ ದಯೆ ಸಿಗಬೇಕೆಂದರೆ?: ಆ ವಿಷಯದ ಬಗ್ಗೆ ಒಂಬತ್ತು ಸಂಚಿಕೆಗಳನ್ನು ಹೇಳಿದ್ದೇನೆ, ಪ್ರತಿಯೊಬ್ಬರೂ ಇವುಗಳನ್ನು ತಪ್ಪದೇ ಕೇಳಬೇಕು. ನೀನು ಎಂತಹ ಕರ್ಮವನ್ನು ಮಾಡುತ್ತೀಯೋ ಅಂತಹ ಫಲವನ್ನೇ ಅನುಭವಿಸುತ್ತೀಯ ಎಂದು ಶ್ರೀಕೃಷ್ಣರು ಹೇಳಿದ್ದಾರೆ. ನೀನು ಏನನ್ನು ಬಿತ್ತುತ್ತೀಯೋ ಆ ಬೆಳೆಯನ್ನೇ ಕೊಯ್ಯುತ್ತೀಯ ಎಂದು ಯೇಸು ಕ್ರಿಸ್ತರು ಹೇಳಿದ್ದಾರೆ. ಹಿಂಸೆಯನ್ನು ಬಿತ್ತಿದರೆ ಹಿಂಸೆಯನ್ನೇ ಪಡೆಯುತ್ತೀಯ. ಆನಂದವನ್ನು ಬಿತ್ತಿದರೆ ಆನಂದವನ್ನೇ ಪಡೆಯುತ್ತೀಯ. ಎಲ್ಲವನ್ನೂ ಆನಂದವಾಗಿ ಜೀವಿಸಲು ಬಿಟ್ಟರೆ ನೀನು ಆನಂದವಾಗಿ ಜೀವಿಸುತ್ತೀಯ. ಹಾಗೆಯೇ, ನೀನು ಮಾಡಿದ್ದನ್ನು ಖಂಡಿತವಾಗಿಯೂ ಅನುಭವಿಸಲೇಬೇಕು ಎಂದು ರಾಮಕೃಷ್ಣ ಪರಮಹಂಸರು ಕೂಡ ಅದನ್ನೇ ಹೇಳಿದ್ದಾರೆ. ಖಾರ ತಿಂದರೆ ಬಾಯಿ ಉರಿಯುತ್ತದೆ, ಸಿಹಿ ತಿಂದರೆ ಬಾಯಿ ಮಧುರವಾಗಿರುತ್ತದೆ ಎಂದು ಅವರು ಹೇಳಿದ್ದಾರೆ.

ಹೀಗೆ ದೊಡ್ಡ ದೊಡ್ಡವರೆಲ್ಲರೂ ಹೇಳಿದ್ದಾರೆ. "ವಸಿಷ್ಠರು" ಏನು ಹೇಳಿದ್ದಾರೆಂದರೆ, ನೀನು ಮಾಡಿದ ಕರ್ಮಗಳಿಗಿಂತ ಮೀರಿದ ದೈವವಾಗಲಿ ಅಥವಾ ಪ್ರಾರಬ್ಧವಾಗಲಿ ಬೇರೇನೂ ಇಲ್ಲ ಎಂದಿದ್ದಾರೆ. ಕಷ್ಟಗಳು ಬಂದಾಗ "ದೇವರಿಗೆ ದಯೆ ಇಲ್ಲವೇ?" ಎನ್ನುತ್ತಾರೆ. ಲಾಭ ಉಂಟಾದಾಗ "ದೇವರ ದಯೆ" ಎನ್ನುತ್ತಾರೆ. ಆದರೆ ಈ ಮೊದಲು ನೀವು ಮಾಡಿದ ಕರ್ಮಗಳ ಆಧಾರದ ಮೇಲೆ ಇವೆಲ್ಲವೂ ನಡೆಯುತ್ತಿವೆ ಎಂದು ತಿಳಿದುಕೊಳ್ಳಿ.

ಅದಕ್ಕಾಗಿಯೇ ಆ ಮಹಾನ್ ವ್ಯಕ್ತಿಗಳೆಲ್ಲರೂ ನಮಗೆ ಹೇಳುವುದು ಅದನ್ನೇ. ಮಾಣಿಕ್ಯೇಶ್ವರಿ ಮಾತೆಯವರು ಕೂಡ ಖಂಡಿತವಾಗಿಯೂ ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಸೇವಿಸಬೇಡಿ ಎಂದು ಹೇಳಿದ್ದಾರೆ. ಅಂತಹ ಆಹಾರವನ್ನು ಎಂತಹ ಪರಿಸ್ಥಿತಿಯಲ್ಲೂ ಸೇವಿಸಬಾರದು. ಆಹಾರದ ವಿಷಯದಲ್ಲಿ ತುಂಬಾ ಜಾಗರೂಕರಾಗಿರಬೇಕು ಎಂದಿದ್ದಾರೆ. ಪತ್ರೀಜಿಯವರು ಕೂಡ ಇದೇ ವಿಷಯವನ್ನು ನಮಗೆ ಪದೇ ಪದೇ ಹೇಳುತ್ತಿರುತ್ತಾರೆ, ಒತ್ತಿ ಹೇಳುತ್ತಿರುತ್ತಾರೆ. "ಈ ಜೀವಹಿಂಸೆಯನ್ನು ಬಿಡಿಸಲು, ಹಿಂಸೆ ನಡೆಯದಂತೆ ನೋಡಿಕೊಳ್ಳುವುದಕ್ಕಾಗಿಯೇ ನಾನು ಈ ಭೂಮಿಯ ಮೇಲೆ ಬಂದಿದ್ದೇನೆ" ಎನ್ನುತ್ತಾರೆ. ಹಾಗೆಯೇ ಎಲ್ಲರನ್ನೂ ಸಸ್ಯಾಹಾರಿಗಳನ್ನಾಗಿ ಮಾಡುವುದಕ್ಕಾಗಿಯೇ ಬಂದಿದ್ದೇನೆ ಎಂದು ಅಷ್ಟೊಂದು ಸ್ಪಷ್ಟವಾಗಿ ಹೇಳುತ್ತಾರೆ.

ಅಸಲಿಗೆ ಅವುಗಳ ಪರವಾಗಿ ನಾನು ವಕಾಲತ್ತು ವಹಿಸಲು ಬಂದಿದ್ದೇನೆ ಎನ್ನುತ್ತಾರೆ. "ನನ್ನ ಪ್ರಥಮ ಆದ್ಯತೆ ಹಿಂಸೆಯನ್ನು ನಿಲ್ಲಿಸುವುದೇ" ಎಂದು

ಹೇಳಿದ್ದಾರೆ. ನಾನು ಐವತ್ತು ಸಾವಿರ ಪುಸ್ತಕಗಳನ್ನು ಓದಿದೆನು ಅವೆಲ್ಲವನ್ನೂ ನಾನು ಮಿಕ್ಸಿಯಲ್ಲಿ ಹಾಕಿದೆನು (ಅರ್ಥಾತ್ ಮೆಲುಕು ಹಾಕಿದೆನು). ಅವುಗಳ ಸಾರಾಂಶ ಎರಡು ವಾಕ್ಯಗಳಲ್ಲಿ ಬಂದಿದೆ. "ಹಿಂಸ ಛೋಡೋ, ಹಂಸ ಪಕಡೋ." (ಹಿಂಸೆಯನ್ನು ಬಿಡು, ಹಂಸವನ್ನು ಹಿಡಿ). ಹಿಂಸ ಛೋಡೋ ಎಂದರೆ ಹಿಂಸೆಯನ್ನು ಬಿಡಬೇಕು, ಅಂದರೆ ಆಹಾರಕ್ಕಾಗಿ ಮಾಡುವ ಹಿಂಸೆಯನ್ನು ತ್ಯಜಿಸಬೇಕು. ಹಂಸ ಪಕಡೋ ಎಂದರೆ ಶ್ವಾಸವನ್ನು ಹಿಡಿಯಬೇಕು, ಅಂದರೆ ಧ್ಯಾನ ಮಾಡಬೇಕು ಎಂದು ಹೇಳಿದರು.

ಇನ್ನೂ ಅವರು ಏನೆನ್ನುತ್ತಾರೆಂದರೆ, ನೀವು ಧ್ಯಾನ ಮಾಡದಿದ್ದರೂ ಪರವಾಗಿಲ್ಲ, ಹಿಂಸೆಯನ್ನು ಮಾತ್ರ ಬಿಟ್ಟುಬಿಡಿ ಎನ್ನುತ್ತಾರೆ. "ಜ್ಞಾನ"ಕ್ಕಿಂತಲೂ "ಮಾಂಸಾಹಾರ" ಬಿಟ್ಟುಬಿಡುವುದಕ್ಕೆ "ಟಾಪ್ ಪ್ರಯಾರಿಟಿ" (ಅತ್ಯಂತ ಆದ್ಯತೆ) ನೀಡಿದರು. "ಹಿಂಸ ಛೋಡೋ" ಎನ್ನುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಅದನ್ನೇ ಮಾಣಿಕ್ಯೇಶ್ವರಿ ಮಾತೆ ಹೇಳುತ್ತಿದ್ದಾರೆ. ಏಕೆಂದರೆ ಪತ್ರೀಜಿ ಅವರು ಅದು ಪಾಪ ಎಂದು ಹೇಳಿದರು. ಒಂದು ಜೀವಿಯನ್ನು ಹಿಂಸಿಸುವುದು ಪಾಪ. ಬಹಳಷ್ಟು ಜನರು ಪಾಪ ಮಾಡಬಾರದು ಎನ್ನುತ್ತಾರೆ. ಅಸಲಿಗೆ ಪಾಪ ಎಂದರೆ ಏನು? ಕಳ್ಳತನ ಮಾಡುವುದೇ? ಸುಳ್ಳು ಹೇಳುವುದೇ? ಎಲ್ಲಕ್ಕಿಂತ ದೊಡ್ಡ ಪಾಪ "ಹಿಂಸೆ ಮಾಡುವುದೇ." ಎಲ್ಲಕ್ಕಿಂತ ಘೋರವಾದ ದೊಡ್ಡ ಪಾಪ ಹಿಂಸೆಯೇ!

ಪಾಪವೆಂದರೆ ನಮ್ಮಿಂದ ಇತರರಿಗೆ ನಷ್ಟವಾಗಲಿ, ಕಷ್ಟವಾಗಲಿ ಅಥವಾ ಅಲ್ಪಪ್ರಮಾಣದ ನೋವಾಗಲಿ ಉಂಟಾದರೆ ಅದನ್ನು "ಪಾಪ" ಎನ್ನುತ್ತಾರೆ. ಹಾಗಿರುವಾಗ ನೀವು ಹಿಂಸೆ ಮಾಡಿದರೆ ಆ ಜೀವಿಯ ಶರೀರಕ್ಕೆ ನೋವಾಗುತ್ತದಲ್ಲವೇ? ಆದ್ದರಿಂದ ಒಂದು ಜೀವಿಯನ್ನು ಕೊಲ್ಲುವುದು, ಹಿಂಸಿಸುವುದು ಪಾಪ. ಅದಕ್ಕೇ ಪತ್ರೀಜಿ ಅವರು... **"ದೊಡ್ಡ ದೊಡ್ಡ ಪಾಪಗಳನ್ನು ಮಾಡಿದರೆ ದೊಡ್ಡ ದೊಡ್ಡ ರೋಗಗಳು – ಸಣ್ಣ ಸಣ್ಣ ಪಾಪಗಳನ್ನು ಮಾಡಿದರೆ ಸಣ್ಣ ಸಣ್ಣ ರೋಗಗಳು ವಿವಿಧ ರೀತಿಯ ಪಾಪಗಳನ್ನು ಮಾಡಿದರೆ ವಿವಿಧ ರೀತಿಯ ರೋಗಗಳು ಬರುತ್ತವೆ"** ಎನ್ನುತ್ತಾರೆ. ಪಾಪಗಳನ್ನು ಮಾಡುವುದು ಏಕೆ? ರೋಗಗಳನ್ನು ತಂದುಕೊಳ್ಳುವುದು ಏಕೆ? ರೋಗಗಳು ಬಂದಿವೆ ಎಂದು ಅಳುತ್ತಾ ಕೂರುವುದು ಏಕೆ? ಪಾಪಗಳನ್ನೇ ಮಾಡದಿದ್ದರೆ ಈ ರೋಗಗಳು ಬರುವುದಿಲ್ಲವಲ್ಲ! ಅದಕ್ಕೇ ಅವರು ಮಾಡಬೇಡಿ ಎಂದು ಹೇಳಿದರು.

ಅಂತಹ ಮಹಾನುಭಾವರು ಸೃಷ್ಟಿಯ ರಹಸ್ಯಗಳನ್ನೆಲ್ಲಾ ತಿಳಿದುಕೊಂಡವರು,

ಅವರು ಸುಮ್ಮನೆ ಏನನ್ನೂ ಹೇಳುವುದಿಲ್ಲ. ಅವರು ಹೇಳಿದರೆಂದರೆ

ಖಂಡಿತವಾಗಿಯೂ ಅದು ಸತ್ಯವನ್ನೇ ಹೇಳುತ್ತಾರೆ. ಅಂತಹವರ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ನಷ್ಟ ಅನುಭವಿಸುವವರು ನೀವೇ, ನೀವು ನಷ್ಟಕ್ಕೊಳಗಾಗಬಾರದು. ಅವರ ಬಳಿಗೆ ಏಕೆ ಹೋಗುತ್ತೀರಿ? ಅವರ ಬಳಿಗೆ ಹೋದರೆ ಒಳ್ಳೆಯದಾಗುತ್ತದೆ ಎಂದಲ್ಲವೇ! ಒಳ್ಳೆಯದು ಹೇಗೆ ನಡೆಯುತ್ತದೆ? ಅವರು ನೀಡುವ ಒಳ್ಳೆಯ ಸಂದೇಶಗಳನ್ನು "ಆಚರಣೆಯಲ್ಲಿ" ತಂದಾಗ ಮಾತ್ರ ಒಳ್ಳೆಯದಾಗುತ್ತದೆ. ಅವರೇನೋ ಆಶೀರ್ವದಿಸುತ್ತಾರೆ, ಆದರೆ ನೀವು ಇನ್ನೂ ಪಾಪಗಳನ್ನು ಮಾಡುತ್ತಿದ್ದರೆ ಅವರ ಬಳಿಗೆ ಹೋದರೂ ಪ್ರಯೋಜನವೇನು? ಆದ್ದ-ರಿಂದ ಅಂತಹ ಸದ್ಗುರುಗಳು, ಶ್ರೇಷ್ಠರು ಮತ್ತು ಮಹಾತ್ಮರ ಬಳಿಗೆ ನೀವು ಹೋದರೆ, ಅವರು ನೀಡುವ ಸಂದೇಶವೇನು ಎಂಬುದರ ಮೇಲೆ ದೃಷ್ಟಿ ಹರಿಸಿ. ಅವರು ನಿಮ್ಮನ್ನು ಆಶೀರ್ವದಿಸಿದರೇ? ಇಲ್ಲವೇ? ಅವರ ಕಾಲುಗಳನ್ನು ನೀವು ಹಿಡಿದುಕೊಂಡಿರೋ? ಇಲ್ಲವೋ? ಅದು ಮುಖ್ಯವಲ್ಲ. ಪತ್ರಿಜಿಯವರು ಹೇಳುತ್ತಿರುತ್ತಾರೆ "ನನ್ನ ಕಾಲುಗಳನ್ನು ಹಿಡಿದುಕೊಂಡರೆ ಏನಾಗುತ್ತದೆ? ನಾನು ಆಶೀರ್ವದಿಸಿದರೆ ಮಾತ್ರ ಏನಾಗುತ್ತದೆ? ನಾನು ಹೇಳಿದ್ದನ್ನು ಆಚರಿಸಿ." ಇದನ್ನೇ ಅವರು ಹೇಳುವುದು. ಅವರು ಹೇಳುವ ಮಾತುಗಳಲ್ಲಿನ ಒಳಾರ್ಥವನ್ನು ನಾವು ಅರ್ಥಮಾಡಿಕೊಳ್ಳಬೇಕು. ಹಿಂಸೆಯನ್ನು ಬಿಡಬೇಕು. ಹಿಂಸೆಯಿಂದ ಕೂಡಿದ ಆಹಾರವನ್ನು ತ್ಯಜಿಸಬೇಕು. ಬಹಳಷ್ಟು ಜನರು ಅದರ ರುಚಿಗೆ ದಾಸರಾಗಿ ಅದನ್ನು ಬಿಡಲಾರರು, ಆದರೆ ನಿಧಾನವಾಗಿ ಇದನ್ನು ಅರ್ಥಮಾಡಿಕೊಂಡರೆ ಬಿಡಬಹುದು. ಪತ್ರಿಜಿಯವರು ಬಂದ ನಂತರ ಲಕ್ಷಾಂತರ ಜನರು (ಮಾಂಸಾಹಾರವನ್ನು) ಬಿಟ್ಟಿದ್ದಾರೆ. ಮಾಂಸಾಹಾರ ತಿನ್ನುವ ಅಭ್ಯಾಸವಿದ್ದ ಎಷ್ಟೋ ಜನರು ಅದನ್ನು ಬಿಟ್ಟಿದ್ದಾರೆ.

ನಿಜವಾಗಿಯೂ ಈ ಕಷ್ಟಗಳು ಬಂದವರನ್ನು ನಾವು ಗಮನಿಸಿದರೆ, ಖಂಡಿತವಾಗಿಯೂ ಅವರು 30 ವರ್ಷಗಳಿಂದ, 40 ವರ್ಷಗಳಿಂದ ಅಥವಾ 50 ವರ್ಷಗಳಿಂದ ಈ ಜೀವಹಿಂಸೆ ಮಾಡುತ್ತಿರುವವರೇ ಆಗಿರುತ್ತಾರೆ. ಎಂತಹ ಹಿಂಸೆ ಮಾಡುತ್ತಾರೋ ಅಂತಹ ನರಕವನ್ನು ಅನುಭವಿಸುತ್ತಿರುತ್ತಾರೆ. ಸರಿ! ಆ ಬಾಧೆಗಳೊಂದಿಗೆ ಬಂದವರು ನಮ್ಮ ಮಾತನ್ನು ಕೇಳಿ ತಕ್ಷಣವೇ ಬಿಡುತ್ತಿದ್ದಾರೆ. ಅರ್ಥಮಾಡಿಕೊಳ್ಳುತ್ತಿದ್ದಾರೆ, ಸ್ವಲ್ಪ ಆಲಿಸುತ್ತಿದ್ದಾರೆ ಮತ್ತು ಕೇಳಲು ಆಸಕ್ತಿ ತೋರಿಸುತ್ತಿದ್ದಾರೆ. ನಮ್ಮ ಕ್ಷಣಿಕ ಸಂತೋಷಗಳು ಮುಖ್ಯವಲ್ಲ. ಈಗ ಅದು ಮೋಜಿನಂತೆ ಇರಬಹುದು, ಆದರೆ ನಂತರ ನರಕವಿರುತ್ತದೆ.

ಜನರು ಗುರುಗಳ (ಮಾಸ್ಟರ್ಸ್) ಬಳಿಗೆ ಹೋಗಿ, "ಈ ಕಾಯಿಲೆ

ಹೋಗಬೇಕೆಂದರೆ, ಈ ಕಷ್ಟ ದೂರವಾಗಬೇಕೆಂದರೆ ಏನು ಮಾಡಬೇಕು? ಸಂಕಲ್ಪ ಮಾಡಬೇಕಾ? ಅಥವಾ ಬೇರೇನು ಮಾಡಬೇಕು? ಎಷ್ಟು ಸಮಯ ಧ್ಯಾನ ಮಾಡಬೇಕು?" ಎಂದು ಕೇಳುತ್ತಾರೆ. ಆದರೆ ಕೇವಲ ಇವುಗಳನ್ನು ಮಾಡುವುದರಿಂದ ಪ್ರಯೋಜನವಿಲ್ಲ. ಮೊದಲು ನೀವು ಮಾಡಬಾರದ ಕೆಲಸಗಳನ್ನು ಮಾಡುವುದನ್ನು ನಿಲ್ಲಿಸಬೇಕು.

ನೀವು ಮಾಡುತ್ತಿರುವ ತಪ್ಪನ್ನು ನೀವು ತಿಳಿದುಕೊಳ್ಳಬೇಕು! ನಿಮ್ಮ ತಪ್ಪನ್ನು ಅರಿತು ಅದನ್ನು ಸರಿಪಡಿಸಿಕೊಂಡಾಗ, ಅದರ ಪ್ರಭಾವವು ಅಲ್ಲಿಯೇ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಯಾವಾಗ ನೀವು ಆ ತಪ್ಪನ್ನು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿ, ಜೀವನದಲ್ಲಿ ಮತ್ತೆಂದೂ ಅಂತಹ ತಪ್ಪನ್ನು ಮಾಡುವುದಿಲ್ಲವೋ, ಆಗ ಅದರ ಸಂಪೂರ್ಣ ಪ್ರಭಾವವು ಹೊರಟುಹೋಗುತ್ತದೆ. ಅದಕ್ಕಾಗಿಯೇ ಪತ್ರಿಜಿಯವರು **"ಗತಂ ಅವಗತಂ ಐತೇ ವಿಗತಂ ಅವುದುತ್ತುಂದಿ"** (ಅಂದರೆ: ಭೂತಕಾಲದ ಅರಿವು ಉಂಟಾದಾಗ, ಅದು ಕಳೆದುಹೋಗುತ್ತದೆ) ಎಂದು ಹೇಳುತ್ತಾರೆ. 'ಗತಂ' ಎಂದರೆ ಹಿಂದೆ ನೀವು ಮಾಡಿದ 'ಹಿಂಸೆ'ಯನ್ನು ಅರ್ಥಮಾಡಿಕೊಂಡು, ಎಂತಹ ಪರಿಸ್ಥಿತಿಯಲ್ಲೂ, ಎಷ್ಟೇ ಒತ್ತಡ ಅಥವಾ ಮುಜುಗರವಿದ್ದರೂ ಇನ್ನು ಮುಂದೆ ನನ್ನ ಜೀವನದಲ್ಲಿ ನಾನು ಹಿಂಸೆ ಮಾಡುವುದಿಲ್ಲ ಎಂದು ನಿರ್ಧರಿಸಿದಾಗ, ಅದರ ಕೆಟ್ಟ ಪ್ರಭಾವವು ಹೋಗುತ್ತದೆ. ಅಂತಹ ಜ್ಞಾನವನ್ನು ನೀವು ಪಡೆದಾಗ ಪಾಪವು ದೂರವಾಗುತ್ತದೆ ಎಂದು ಪತ್ರಿಜಿಯವರು ಹೇಳುತ್ತಾರೆ. ಶ್ರೀಕೃಷ್ಣನು ಕೂಡ ಹೇಳಿದ್ದು ಇದನ್ನೇ: "ಜ್ಞಾನಾಗ್ನಿ ದಗ್ಧ ಕರ್ಮಾಣಾಂ" – ನೀನು ಪಡೆದ ಈ ಜ್ಞಾನದ ಅಗ್ನಿಯಲ್ಲಿ ನಿನ್ನ ಪಾಪ ಕರ್ಮಗಳೆಲ್ಲವೂ ಸುಟ್ಟು ಭಸ್ಮವಾಗುತ್ತವೆ.

ಸಾಮಾನ್ಯವಾಗಿ ಎಲ್ಲರ ತಿಳುವಳಿಕೆ ಏನೆಂದರೆ, ಯಾವುದಾದರೂ ಕಾಯಿಲೆ ಬಂದರೆ ಡಾಕ್ಟರ್ ಹತ್ತಿರ ಹೋದರೆ ಸಾಕಲ್ಲವೇ ಎಂದುಕೊಳ್ಳುತ್ತಾರೆ. ಆದರೆ ಆ ಕಾಯಿಲೆ ಏಕೆ ಬಂದಿತು ಎಂದು ಯೋಚಿಸುವುದಿಲ್ಲ! ನೀವು ಮಾಡುತ್ತಿರುವ ಆ 'ಹಿಂಸೆ'ಯೇ ಈ ಕಾಯಿಲೆಗೆ ಕಾರಣವಲ್ಲವೇ? ಇನ್ನು ಮುಂದೆ ಆ ಕಾಯಿಲೆ ಬರಬಾರದೆಂದರೆ ನೀವು ಹಿಂಸೆಯನ್ನು ನಿಲ್ಲಿಸಬೇಕಲ್ಲವೇ? ಕೇವಲ ಔಷಧಿಗಳನ್ನು ತೆಗೆದುಕೊಂಡು ನಾಲ್ಕು ದಿನ ಗುಣವಾದ ಮೇಲೆ ಮತ್ತೆ ಹಳೆಯ ಹಾದಿಯನ್ನೇ ಹಿಡಿದರೆ, ಕಾಯಿಲೆ ಮೊದಲಿನಿಗಿಂತಲೂ ಉಲ್ಬಣವಾಗಿ ಬರುತ್ತದೆ. ಆದ್ದರಿಂದಲೇ ಅಂತಹ ಹಿಂಸೆಯಿಂದ ಕೂಡಿದ ಮಾಂಸಾಹಾರವನ್ನು ಸೇವಿಸಬೇಡಿ ಎಂದು ಮಾಣಿಕ್ಯೇಶ್ವರಿ ಮಾತೆ ಹೇಳಿದ್ದಾರೆ.

“ಶುದ್ಧ ಸಸ್ಯಾಹಾರವನ್ನೇ ಸೇವಿಸಿ”

ಪತ್ರೀಜಿಯವರು ನಮಗೆ ಹೀಗೆ ಹೇಳುತ್ತಾರೆ: “ಸಾತ್ವಿಕವಾದ ಸಸ್ಯಾಹಾರವೇ ನಿಜವಾದ ಶುದ್ಧ ಸಸ್ಯಾಹಾರ.” ಅಂದರೆ ರಜೋಗುಣ ಪ್ರಧಾನವಾದ ಅಥವಾ ತಮೋಗುಣ ಪ್ರಧಾನವಾದ ಆಹಾರಗಳನ್ನು ಸೇವಿಸಬಾರದು. ಅನೇಕರು ನಾವು ಮಾಂಸಾಹಾರವನ್ನು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ, ಆದರೆ ಅವರು ಸೇವಿಸುವ ಸಸ್ಯಾಹಾರದಲ್ಲೂ ತಮೋಗುಣ ಮತ್ತು ರಜೋಗುಣದ ಆಹಾರಗಳಿರುತ್ತವೆ. ಅವುಗಳನ್ನು ಸಹ ಸೇವಿಸಬೇಡಿ ಎಂದು ಪತ್ರೀಜಿಯವರು ತಿಳಿಸುತ್ತಿದ್ದಾರೆ. ಮುಖ್ಯವಾಗಿ ಸಸ್ಯಾಹಾರದಲ್ಲಿ “ಬೆಳ್ಳುಳ್ಳಿ” ರಜೋಗುಣವನ್ನು ಹೆಚ್ಚಿಸುತ್ತದೆ. ಯಾರೇ ಆದರೂ ಸಸ್ಯಾಹಾರದಲ್ಲಿ ಬೆಳ್ಳುಳ್ಳಿಯನ್ನು ಬಳಸಬಾರದು. ಮಾಂಸಾಹಾರವನ್ನು ಸೇವಿಸಿದರೆ ಯಾವ ರೀತಿಯ ರಜೋಗುಣ ಉಂಟಾಗುತ್ತದೆಯೋ, ಬೆಳ್ಳುಳ್ಳಿಯನ್ನು ಸೇವಿಸಿದಾಗಲೂ ಅದೇ ಗುಣ ಉಂಟಾಗುತ್ತದೆ. ಮಾನವನಿಗೆ ಹಾನಿ ಮಾಡುವ ಗುಣಗಳೇ ಇವೆರಡು: ತಮೋಗುಣ ಮತ್ತು ರಜೋಗುಣ. ಆದ್ದರಿಂದ ಇವುಗಳಿಗೆ ಸಂಬಂಧಿಸಿದ ಆಹಾರಗಳನ್ನು ತ್ಯಜಿಸಿ, ಸಾತ್ವಿಕ ಗುಣದ ಆಹಾರವನ್ನೇ ಸೇವಿಸಬೇಕು.

ತಮೋಗುಣ ಪ್ರಧಾನವಾದ ಆಹಾರಗಳ ಬಗ್ಗೆ ತಿಳಿಯೋಣ:

- ☛ **ಹಳೆಯದಾದ, ಹುಳಿಯಾದ, ಕೊಳೆತು ಹೋದ ಆಹಾರ ಪದಾರ್ಥಗಳನ್ನು ತಿನ್ನಬಾರದು ಎಂದು ಪತ್ರೀಜಿ ಹೇಳುತ್ತಾರೆ.**
- ☛ **ಅಡುಗೆ ಮಾಡಿ ಫ್ರಿಜ್‌ನಲ್ಲಿಟ್ಟ ಪದಾರ್ಥಗಳನ್ನು ತಿನ್ನಬಾರದು.**
- ☛ **ಅನೇಕರು ರಾತ್ರಿ ಮಾಡಿದ್ದನ್ನು ಬೆಳಿಗ್ಗೆ ತಿನ್ನುತ್ತಾರೆ. ಇಂತಹ ಹಳಸಲು ಅನ್ನ (ಚದ್ದನ್ನಂ) ಬೇಡ ಎನ್ನುತ್ತಾರೆ.**
- ☛ **ಅಂದಂದೇ ಅಡುಗೆ ಮಾಡಿ ತಾಜಾವಾಗಿ ತಿನ್ನಬೇಕು.**
- ☛ **ಕೆಲವರು ಬೆಳಿಗ್ಗೆ ಮಾಡಿದ ಪದಾರ್ಥಗಳನ್ನು ಫ್ರಿಜ್‌ನಲ್ಲಿಟ್ಟು, ಮತ್ತೆ ಬಿಸಿ ಮಾಡಿ ತಿನ್ನುತ್ತಾರೆ. ಹಾಗೆ ಮಾಡುವುದು ಕೂಡ ಸರಿಯಲ್ಲ. ಉದಾಹರಣೆಗೆ: ಇಡ್ಲಿಗಳು ಉಳಿದರೆ ಫ್ರಿಜ್‌ನಲ್ಲಿಟ್ಟು ಮರುದಿನ ಉಪ್ಪಿಟ್ಟು ಮಾಡುವುದು ಅಥವಾ ಬೇಳೆ ಸಾರು ಉಳಿದರೆ ಮರುದಿನ ಅದಕ್ಕೆ ತರಕಾರಿ ಹಾಕಿ ಸಾಂಬಾರ್ ಮಾಡುವುದು ಸರಿಯಲ್ಲ.**

ಹಾಗೆಯೇ ಮೊಸರು ಹುಳಿಯಾದರೆ ಸ್ವಲ್ಪ ಉಪ್ಪು ಹಾಕಿಕೊಂಡು ತಿನ್ನುತ್ತಲೇ ಇರುತ್ತಾರೆ. ಇಂತಹವುಗಳನ್ನು ತಿನ್ನಬೇಡಿ ಎಂದು ಹೇಳುತ್ತಾರೆ. ಇವೆಲ್ಲವೂ ತಮೋಗುಣವನ್ನು ಉಂಟುಮಾಡುತ್ತವೆ. ಆದ್ದರಿಂದಲೇ ನಾನು ಎಲ್ಲಿಗೆ ಹೋದರೂ ಆಹಾರದ ವಿಷಯದಲ್ಲಿ ಬಹಳ ಜಾಗರೂಕರಾಗಿ ಇರಬೇಕೆಂದು ಹೇಳುತ್ತೇನೆ.

ಧ್ಯಾನಕ್ಕೆ ನೀವು ಎಷ್ಟು ಶ್ರದ್ಧೆ ವಹಿಸುತ್ತೀರೋ, ಆಹಾರದ ವಿಷಯದಲ್ಲೂ ಅಷ್ಟೇ ಶ್ರದ್ಧೆ ವಹಿಸಬೇಕೆಂದು ಹೇಳುತ್ತಾರೆ.

ರುಚಿಗೆ ದಾಸರಾಗಬಾರದು, ನೀವು ತೆಗೆದುಕೊಳ್ಳುವ ಆಹಾರ ನಿಮಗೆ ಲಾಭವನ್ನು ನೀಡಬೇಕು. ಅದು ನಿಮ್ಮ ಸಾಧನೆಯನ್ನು ಉತ್ತಮಪಡಿಸುವಂತಿರಬೇಕು, ಹಾಳು ಮಾಡಬಾರದು. ಧ್ಯಾನ ಸಾಧನೆ ಮಾಡುವುದು ಎಂದರೆ ಎಷ್ಟೋ ಕಷ್ಟ. ಇಷ್ಟು ಕಷ್ಟಪಟ್ಟು ಧ್ಯಾನ ಸಾಧನೆ ಮಾಡಿ ಆಹಾರದ ವಿಷಯದಲ್ಲಿ ನಿಯಮಗಳನ್ನು ಪಾಲಿಸದಿದ್ದರೆ ನಷ್ಟ ಅನುಭವಿಸುವವರು ನೀವೇ!

ಅದಕ್ಕಾಗಿಯೇ ನಾನು ಮತ್ತು ನಮ್ಮ ಮೇಡಂ ಕಡ್ಡಾಯವಾಗಿ ಈ ಆಹಾರದ ನಿಯಮಗಳ ಬಗ್ಗೆ ಮೂರು ದಿನಗಳ ಕಾಲ ತರಗತಿಗಳಲ್ಲಿ ಹೇಳುತ್ತೇವೆ. ನಮ್ಮ ಮೇಡಂ ಆಹಾರದ ವಿಷಯದ ಬಗ್ಗೆ ಬಹಳ ಆಳವಾಗಿ ವಿವರಿಸುತ್ತಾರೆ. ಅಂತಹ ಶುದ್ಧವಾದ ಸಸ್ಯಾಹಾರವನ್ನೇ ಸೇವಿಸಬೇಕು. ಕಾರಣ ನಾವು ಪಾಲಿಸುವುದು ಅದನ್ನೇ, ಅದನ್ನೇ ಎಲ್ಲರಿಗೂ ಹೇಳುತ್ತೇವೆ. ನಾವು ಪತ್ರೀಜಿಯವರಿಂದ ಇದನ್ನು ಕಲಿತಿದ್ದೇವೆ. ನಾವು ಎಲ್ಲೆಂದರಲ್ಲಿ ಆಹಾರ ಸೇವಿಸುವುದಿಲ್ಲ, ಯಾವ ಊರಿಗೆ ಹೋದರೂ ಬಹಳ ಜಾಗರೂಕರಾಗಿರುತ್ತೇವೆ.

■ **ಬಹಳಷ್ಟು ಜನರು ಏನು ಮಾಡುತ್ತಾರೆಂದರೆ ಮಾಂಸಾಹಾರ ಹೋಟೆಲ್ಗೆ ಹೋಗಿ ಅಲ್ಲಿ ಸಸ್ಯಾಹಾರವನ್ನೇ ತಿನ್ನುತ್ತಾರೆ. "ನಾವು ಸಸ್ಯಾಹಾರವನ್ನೇ ತಿಂದೆವು" ಎಂದು ಹೇಳುತ್ತಾರೆ. ತಿಂದಿದ್ದು ಸಸ್ಯಾಹಾರವೇ ಇರಬಹುದು, ಆದರೆ ಅಲ್ಲಿನ ಪಾತ್ರೆಗಳು ಬೆರೆತಿರುತ್ತವೆ (ಮಾಂಸಾಹಾರಕ್ಕೆ ಬಳಸಿದ ಪಾತ್ರೆಗಳನ್ನೇ ಬಳಸಿರುತ್ತಾರೆ).**

■ **ಪ್ಯೂರ್ ವೆಜ್ (ಶುದ್ಧ ಸಸ್ಯಾಹಾರ) ಹೋಟೆಲ್ಗಳಿಗೇ ಹೋಗಿ ಆಹಾರ ಸೇವಿಸಬೇಕು. ಅಲ್ಲಿಯೂ ಕೂಡ ಪ್ಯೂರ್ ವೆಜ್ ಆಗಿಯೇ ಇರುತ್ತದೆ ಆದರೆ ಬೆಳ್ಳುಳ್ಳಿಯನ್ನು ಬಳಸುತ್ತಾರೆ. ಅಂತಹ ಸಂದರ್ಭದಲ್ಲಿ ನೀವು ಬೆಳ್ಳುಳ್ಳಿ ಬಳಸುವ ಪದಾರ್ಥಗಳನ್ನು ಬಿಟ್ಟು ಉಳಿದ ಬೇರೆ ಯಾವುದನ್ನಾದರೂ ತೆಗೆದುಕೊಳ್ಳಬಹುದು. ಚೆನ್ನಾಗಿ ಅನ್ನ, ಮೊಸರಿನೊಂದಿಗೆ ತಿನ್ನಬಹುದು. ಆ ಹೊತ್ತಿಗೆ ಅದು ಸಾಕಾಗುತ್ತದೆ.**

■ **ಮರುದಿನ ನೀವು ಮನೆಗೆ ಹೋದಾಗ ಮಾಮೂಲಿಯಂತೆ ಅಡುಗೆ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ಹಣ್ಣುಗಳನ್ನು ತೆಗೆದುಕೊಳ್ಳಬಹುದು, ಹಾಲು ಕುಡಿಯಬಹುದು. ಹೀಗೆ ಬರಿ ಹಾಲಿನ ಮೇಲೆ, ಹಣ್ಣುಗಳ ಮೇಲೆ ಜೀವಿಸುವವರು ಎಷ್ಟೋ ಮಂದಿ ಇದ್ದಾರೆ.**

ಏನೇ ಆದರೂ ಕಷ್ಟಪಟ್ಟು ಸಂಪಾದಿಸಿದ ಶಕ್ತಿಯನ್ನು ಕಳೆದುಕೊಳ್ಳಬಾರದು. ನೀವು ಎಷ್ಟೋ ಧ್ಯಾನ ಮಾಡಿ ಸಂಪಾದಿಸಿದ ಶಕ್ತಿಯನ್ನು, ನೀವು ಸೇವಿಸುವ

ಆಹಾರದ ಮೂಲಕ ಕಳೆದುಕೊಳ್ಳುತ್ತೀರಿ. ಎಷ್ಟು ವರ್ಷಗಳು ಧ್ಯಾನ ಮಾಡಿದರೂ ಮತ್ತೆ ಮೊದಲಿನಂತೆಯೇ ಇರುತ್ತೀರಿ. ಹಾಗೆ ಏಕೆ ನಷ್ಟ ಮಾಡಿಕೊಳ್ಳಬೇಕು? ಸಾಧನೆ ಮಾಡಲು ಎಷ್ಟೋ ಕಷ್ಟಪಡುತ್ತಿದ್ದೀರಿ. ಧ್ಯಾನದಲ್ಲಿ ಕುಳಿತುಕೊಳ್ಳುವುದು ಎಂದರೆ ಸಾಮಾನ್ಯ ವಿಷಯವಲ್ಲ. ಆಲೋಚನೆಗಳನ್ನು ತಡೆದುಕೊಳ್ಳುತ್ತಾ ಹಾಗೆ ಕುಳಿತುಕೊಳ್ಳುವುದು ಸುಲಭದ ಮಾತಲ್ಲ. ಏನನ್ನಾದರೂ ಸುಲಭವಾಗಿ ಮಾಡಬಹುದು, ಆದರೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದು ತುಂಬಾ ಕಷ್ಟ. ರಾತ್ರಿ ನಿದ್ರೆಯಲ್ಲಿ ಕಣ್ಣು ಮುಚ್ಚಿ ಮಲಗುತ್ತೀರಿ, ಅದು ಬೇರೆ. ಆಗಲೂ ಸಹ ಸುಮ್ಮನೆ ಮಲಗಿದ ತಕ್ಷಣ ನಿದ್ರೆ ಬರುವುದಿಲ್ಲ. ಇನ್ನು ಧ್ಯಾನದ ಎಚ್ಚರದ ಸ್ಥಿತಿಯಲ್ಲಿ, ಅರಿವಿನ ಸ್ಥಿತಿಯಲ್ಲಿ ಕಣ್ಣು ಮುಚ್ಚಿರುವುದು ಸಾಮಾನ್ಯ ವಿಷಯವಲ್ಲ.

ಅಷ್ಟು ಕಷ್ಟಪಟ್ಟು ಶಕ್ತಿಯನ್ನು ಸಂಪಾದಿಸುತ್ತಿದ್ದೀರಿ. ಆ ಶಕ್ತಿಯಿಂದ ನಿಮಗೆ ಎಷ್ಟೋ ಲಾಭವಾಗುತ್ತದೆ. ನಾನು ಮತ್ತು ಮೇಡಂ ಸುಮಾರು 95 ಪುಸ್ತಕಗಳವರೆಗೆ ಬರೆದಿದ್ದೇವೆ. ನೀವು ಓದಿದರೆ ಪ್ರತಿ ಎರಡು–ಮೂರು ಪುಟಗಳಲ್ಲಿ ಒಂದೊಂದು ಲಾಭ ಇರುತ್ತದೆ. ಹಾಗೆ ನನ್ನ ಪುಸ್ತಕಗಳಲ್ಲಿ ನೂರಾರು ಲಾಭಗಳನ್ನು ಬರೆದಿದ್ದೇನೆ. ಧ್ಯಾನದಲ್ಲಿ ಅಷ್ಟು ಲಾಭಗಳಿವೆ. ಅಸಲಿಗೆ ಜೀವನದ ಯಾವುದೇ ಸಮಸ್ಯೆಗಾದರೂ ಪರಿಹಾರ ಎರಡೇ ಎರಡು: ಸಾತ್ವಿಕವಾದ ಸಸ್ಯಾಹಾರ, ಹಾಗೆಯೇ "ಶ್ವಾಸದ ಮೇಲೆ ಗಮನ ಇರುವ ಧ್ಯಾನ".

ಅದಕ್ಕಾಗಿಯೇ ಮಾಣಿಕ್ಯೇಶ್ವರಿ ಮಾತೆ ಅವರು ಬಹಳ ಉತ್ತಮವಾದ ಶುದ್ಧ ಸಸ್ಯಾಹಾರವನ್ನು ಸೇವಿಸಬೇಕೆಂದು ಹೇಳಿದರು. ಪತ್ರೀಜಿಯವರು ಹೇಳಿದಂತೆ ಸಾತ್ವಿಕ ಸಸ್ಯಾಹಾರ, ನಮ್ಮ ಮೇಡಂ ಇನ್ನೂ ಆಳವಾಗಿ **"ಪಾತ್ರೆ ಶುದ್ಧಿ – ಪದಾರ್ಥ ಶುದ್ಧಿ – ಪಾಕ ಶುದ್ಧಿ"** ಎಂದು ಹೇಳುತ್ತಾರೆ. ನೀವು ಇಷ್ಟು ಆಳವಾಗಿ ಪಾಲಿಸುತ್ತಾ ತಮೋಗುಣ ಪ್ರಧಾನವಾದ, ರಜೋಗುಣ ಪ್ರಧಾನವಾದ ಆಹಾರಗಳನ್ನು ಬಿಟ್ಟುಬಿಡಬೇಕು.

■ "ಪಾತ್ರೆಶುದ್ಧಿ" ಎಂದರೆ ನಿಮ್ಮ ಮನೆಯಲ್ಲಿ ಕೆಲವರು ಮಾಂಸಾಹಾರ ಸೇವಿಸುತ್ತಿರುತ್ತಾರೆ, ಕೆಲವರು ಬಿಟ್ಟಿರುತ್ತಾರೆ. ಅವರು ತಿಂದ ಪಾತ್ರೆಗಳಲ್ಲಿ ನೀವು ತಿಂದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ.

■ ಸಾಮಾನ್ಯವಾಗಿ ನೀವು ನಿಮ್ಮ ಮನೆಯಲ್ಲಿ ಜಾಗರೂಕರಾಗಿರುತ್ತೀರಿ, ಆದರೆ ಸಂಬಂಧಿಕರ ಮನೆಗೆ ಹೋದಾಗ ಅಲ್ಲಿಯ ಪಾತ್ರೆಗಳನ್ನೇ ಬಳಸುತ್ತೀರಿ. ಆ ತಟ್ಟೆಗಳಲ್ಲೇ ಬಡಿಸುತ್ತಾರೆ, ಆ ಪಾತ್ರೆಗಳಲ್ಲೇ ನಿಮಗಾಗಿ ಶಾಖಾಹಾರವನ್ನು ಅಡುಗೆ ಮಾಡುತ್ತಾರೆ. ಇದರಿಂದ ಯಾವುದೇ ಪ್ರಯೋಜನವಿಲ್ಲ. ನೀವು ಆರು

ತಿಂಗಳಿಂದ ಮಾಡಿದ ಸಾಧನೆಯೂ ವ್ಯರ್ಥವಾಗುತ್ತದೆ. ಆದ್ದರಿಂದ ನಿಮ್ಮ ಪಾತ್ರೆಗಳನ್ನು ನೀವೇ ಕೊಂಡೊಯ್ಯಬೇಕು.

■ ಮನೆಯಲ್ಲೂ ಸಹ ಇಬ್ಬರೂ ಶಾಖಾಹಾರಿಗಳಲ್ಲದಿದ್ದರೆ ನಿಮ್ಮ ಪಾತ್ರೆಗಳನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಿ. ನಿಮ್ಮ ಪಾತ್ರೆಗಳಲ್ಲಿ ನೀವೇ ಅಡುಗೆ ಮಾಡಿಕೊಳ್ಳಿ. ಏಕೆಂದರೆ ಪತಿ–ಪತ್ನಿಯರಿಬ್ಬರೂ ಪೂರ್ಣವಾಗಿ ಶಾಖಾಹಾರಿಗಳಾಗದಿರಬಹುದು. ಪತಿ ಧ್ಯಾನಕ್ಕೆ ಬಂದರೆ ಪತ್ನಿ ಬರದ ಎಷ್ಟೋ ಕುಟುಂಬಗಳಿವೆ. ಪತ್ನಿ ಧ್ಯಾನಕ್ಕೆ ಬಂದರೆ ಪತಿ ಬರದ ಎಷ್ಟೋ ಕುಟುಂಬಗಳಿವೆ. ಇದಕ್ಕೆ ಮುಖ್ಯ ಕಾರಣ ಅವರ "ಆತ್ಮಸ್ಥಿತಿ". ಯಾರು 250 ರಿಂದ 300 ಜನ್ಮಗಳನ್ನು ದಾಟಿ ಬಂದಿರುತ್ತಾರೋ ಅವರು ಮಾತ್ರ ಬರಬಲ್ಲರು. ಮಾಣಿಕ್ಯೇಶ್ವರಿ ಮಾತೆಯು ನಾವೆಲ್ಲರೂ ಆತ್ಮಗಳೆಂದು ಹೇಳಿದ್ದಾರೆ. ಪತ್ನಿ, ಪತಿ ಆತ್ಮಗಳೇ, ಆ ಮಕ್ಕಳು ಆತ್ಮಗಳೇ, ಎಲ್ಲರೂ ಆತ್ಮಗಳೇ. ಹೆಚ್ಚು ಜನ್ಮಗಳನ್ನು ಎತ್ತಿದವರಿಗೆ ಈ ತಿಳುವಳಿಕೆ ಸ್ವಲ್ಪಮಟ್ಟಿಗೆ ಇರುತ್ತದೆ, ಕಡಿಮೆ ಜನ್ಮಗಳಲ್ಲಿ ಇರುವವರಿಗೆ ಈ ತಿಳುವಳಿಕೆ ಇರುವುದಿಲ್ಲ. ಆದ್ದರಿಂದ ಅವರಿಗೆ ಏನೂ ಅರ್ಥವಾಗದಿರಬಹುದು. ಹೆಚ್ಚು ಜನ್ಮಗಳಲ್ಲಿ ಇರುವವರು ಇದನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು (ಮಾಂಸಾಹಾರವನ್ನು) ಬಿಡಬೇಕೆಂದು ನಿರ್ಧರಿಸುತ್ತಾರೆ.

ಆದ್ದರಿಂದ ಅವರು ಬಿಡದಿರಬಹುದು, ಅದರಲ್ಲಿ ವಿಶೇಷವೇನೂ ಇಲ್ಲ. ಅವರೊಂದಿಗೆ ಜಗಳವಾಡಬೇಕಾದ ಅಗತ್ಯವೂ ಇಲ್ಲ. ಯಾರು ಮಾಡಿದ್ದನ್ನು ಅವರೇ ಅನುಭವಿಸುತ್ತಾರೆ. ಸುಮ್ಮನೆ ಎಲ್ಲರೂ ಸೇರಿ ಇರುವುದರಿಂದ ನನ್ನ ಪತಿ, ನನ್ನ ಮಕ್ಕಳು ಎಂದು ಅಂದುಕೊಳ್ಳುತ್ತಾರೆ. ಆದರೆ ಇಲ್ಲಿಯವರೆಗೆ ಮಾತ್ರ, ಆಮೇಲೆ ಒಬ್ಬರಿಗೊಬ್ಬರಿಗೂ ಯಾವುದೇ ಸಂಬಂಧವಿರುವುದಿಲ್ಲ. ಶರೀರಗಳನ್ನು ಬಿಟ್ಟ ಮೇಲೆ ಯಾರು ಯಾವ ಲೋಕಕ್ಕೆ ಹೋಗುತ್ತಾರೋ ತಿಳಿಯದು.

ಜ್ಞಾನವನ್ನು ಹೊಂದಬೇಕೆಂದರೆ......!

1) ಸರಿಯಾದ ಧ್ಯಾನವನ್ನು ಮಾಡಬೇಕು.
2) ಮಾಂಸಾಹಾರವನ್ನು ಸಂಪೂರ್ಣವಾಗಿ ಬಿಡಬೇಕು.
3) ಧ್ಯಾನ ಸಾಧನೆಗೆ ಅನುಕೂಲವಾದ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಬೇಕು.

– 'ಬ್ರಹ್ಮರ್ಷಿ' ತಟವರ್ತಿ ವೀರರಾಘವರಾವ್

“ನೀವು ಮಾಡಬೇಕಾದ ಕೆಲಸಗಳನ್ನು ಪ್ರೀತಿಯಿಂದ, ಸಮರ್ಪಣಾ ಭಾವದಿಂದ ಮಾಡಿ”

ಮಾಣಿಕೇಶ್ವರಿ ಮಾತೆಯವರು ಒಬ್ಬ ಮಹಾನ್ ಯೋಗಿನಿ. ಇಂತಹ ಯೋಗಿಗಳು ಭೂಮಿಯ ಮೇಲೆ ಬಂದಾಗ ಎಲ್ಲರ ಒಳಿತಿಗಾಗಿ ಮತ್ತು ಎಲ್ಲರ ಲಾಭಕ್ಕಾಗಿ ಎಷ್ಟೋ ಸಂದೇಶಗಳನ್ನು ನೀಡುತ್ತಿರುತ್ತಾರೆ. ಅವರು ಲೋಕ ಕಲ್ಯಾಣಕ್ಕಾಗಿ ಜೀವಿಸುತ್ತಾರೆ. ಲೋಕದ ಮಾನವರನ್ನು ಸರಿಯಾದ ಮಾರ್ಗದಲ್ಲಿ, ಒಳ್ಳೆಯ ಮಾರ್ಗದಲ್ಲಿ ನಡೆಸಲು ಪ್ರಯತ್ನಿಸುತ್ತಾರೆ ಮತ್ತು ಅದಕ್ಕಾಗಿ ಶ್ರಮಿಸುತ್ತಾರೆ.

ಯಾರು ಅವರ ಸಂದೇಶಗಳನ್ನು ಜಾಗರೂಕತೆಯಿಂದ ಕೇಳಿ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಾರೋ, ಅವರು ತಮ್ಮ ಜೀವನದಲ್ಲಿ ಕೇವಲ ದುಃಖವನ್ನು ಹೋಗಲಾಡಿಸಿಕೊಳ್ಳುವುದು ಮಾತ್ರವಲ್ಲದೆ, ಬಹಳ ಸಂತೋಷದಿಂದ ಜೀವಿಸುತ್ತಾರೆ. ಆದ್ದರಿಂದ ಅವರು ಹೇಳುವ ಸಂದೇಶಗಳನ್ನು ನಾವು ಕೇವಲ ಕೇಳಿ ಬಿಡಬಾರದು; ಬರೆದುಕೊಳ್ಳಬೇಕು ಮತ್ತು ಅವುಗಳನ್ನು ಆಳವಾಗಿ ವಿಶ್ಲೇಷಿಸಬೇಕು. ಅವರ ಪ್ರತಿಯೊಂದು ಮಾತಿನಲ್ಲೂ ಅಷ್ಟೊಂದು ಅರ್ಥವಿರುತ್ತದೆ, ಅಷ್ಟೊಂದು ಸಂದೇಶವಿರುತ್ತದೆ. ಆದುದರಿಂದ ಅವೆಲ್ಲವನ್ನೂ ನಾವು ತಿಳಿದುಕೊಳ್ಳುತ್ತಿರಬೇಕು.

ಹಿಂದಿನ ಸಂದೇಶಗಳಲ್ಲಿ ಮಾಣಿಕೇಶ್ವರಿ ಮಾತೆಯವರು “ನಿನ್ನನ್ನು ನೀನು ತಿಳಿದುಕೊ” ಎಂದಿದ್ದಾರೆ. ಇದು ಬಹಳ ಮುಖ್ಯವಾದುದು. ಪ್ರತಿಯೊಬ್ಬರೂ ಮೊದಲು ಇದನ್ನು ತಿಳಿದುಕೊಳ್ಳಲೇಬೇಕು. ಇದನ್ನು ತಿಳಿದುಕೊಳ್ಳದಿದ್ದರೆ ಜೀವನವೆಲ್ಲಾ ಅಸ್ತವ್ಯಸ್ತವಾಗುತ್ತದೆ ಮತ್ತು ಮಾಡಿದುದೆಲ್ಲವೂ ವ್ಯರ್ಥವಾಗುತ್ತದೆ, ಆದ್ದರಿಂದ ನಮ್ಮನ್ನು ನಾವು ತಿಳಿದುಕೊಳ್ಳಬೇಕು.

ಏಕೆಂದರೆ ಈ ದೇಹ ನೀವಲ್ಲ, ನೀವು ಆತ್ಮಗಳು. ರಮಣ ಮಹರ್ಷಿಗಳೂ ಸಹ ಯಾರು ಬಂದು ಸಮಸ್ಯೆಗಳನ್ನು ಕೇಳಿದರೂ, “ನೀನು ಯಾರೆಂದು ತಿಳಿದುಕೊ?” ಎಂದು ಅದೇ ಪ್ರಶ್ನೆಯನ್ನು ಕೇಳುತ್ತಿದ್ದರು. ಮೊದಲು ಅದನ್ನು ತಿಳಿದುಕೊಂಡ ಮೇಲೆ, ಆಗ ಮಾಣಿಕೇಶ್ವರಿ ಮಾತೆಯವರು ಏನು ಹೇಳಿದ್ದಾರೆಂದರೆ? “ನೀವು ಮಾಡಬೇಕಾದ ಕೆಲಸಗಳನ್ನು ಪ್ರೀತಿಯಿಂದ, ಸಮರ್ಪಣಾ ಭಾವದಿಂದ ಮಾಡಿ” ಎಂದು ತಿಳಿಸಿದ್ದಾರೆ.

ಆದುದರಿಂದ ನೀವು ಯಾರೆಂದು ನಿಮಗೆ ತಿಳಿದಾಗ ಮಾತ್ರ ನೀವು

ಮಾಡಬೇಕಾದ ಕೆಲಸಗಳು ನಿಮಗೆ ಅರ್ಥವಾಗುತ್ತವೆ. ಒಂದು ವೇಳೆ ನೀವು ಈ ದೇಹವೇ ಎಂದು ಭಾವಿಸಿದರೆ, ಹಣ ಸಂಪಾದಿಸಿ ಸುಖವಾಗಿ ಬದುಕಬಹುದು. ಆದರೆ, ನೀವು ಆತ್ಮ ಎಂದು ಅರಿತುಕೊಂಡಾಗ, ನೀವು ಮಾಡಬೇಕಾದ ಕಾರ್ಯಗಳು ಯಾವುವು ಎಂಬುದು ನಿಮಗೆ ತಿಳಿಯುತ್ತದೆ. ನೀವು ಆತ್ಮನಾದಾಗ, ಆತ್ಮೋನ್ನತಿಗೆ ಬೇಕಾದ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಅದಕ್ಕೆ ಬೇಕಾದ ಧ್ಯಾನ ಸಾಧನೆಯನ್ನು ಮಾಡಬೇಕು. ಜೊತೆಗೆ ಆಧ್ಯಾತ್ಮಿಕ ಪುಸ್ತಕಗಳನ್ನು ಓದುತ್ತಿರಬೇಕು, ಅಂತಹ ಜ್ಞಾನವನ್ನು ಬೋಧಿಸುವವರ ಸಂದೇಶಗಳನ್ನು ಕೇಳುತ್ತಿರಬೇಕು ಮತ್ತು ಆ ಮಾರ್ಗದಲ್ಲಿ ಸೇವೆ ಮಾಡಬೇಕು. ಜ್ಞಾನಕ್ಕೆ ಸಂಬಂಧಿಸಿದ ಎಲ್ಲವನ್ನೂ ಸಮರ್ಪಣಾ ಭಾವದಿಂದ ಮಾಡಬೇಕು. ಏನೋ ಮಾಡಿದೆವು ಎನ್ನುವಂತಿರಬಾರದು; ಒಂದು ಕೆಲಸ ಮಾಡಿದೆವು ಎಂದರೆ ಅದರ ಫಲಿತಾಂಶವನ್ನು ಪಡೆಯಲೇಬೇಕು ಎಂದು ಅವರು (ಆಕೆ) ಹೇಳಿದ್ದಾರೆ.

